**GOVERNMENT OF KARNATAKA**

**KARNATAKA LOKAYUKTA**

No.UPLOK-2/DE/490/2018/ARE-14

Multi Storied Building,
Dr. B.R. Ambedkar Veedhi,
Bengaluru-560001
Date: 30th November, 2022.

# RECOMMENDATION

Sub: Departmental Inquiry against Shriyuths:
(1) Murudaiah.T, the then Panchayath Development Officer, Yaliyuru Grama Panchayath, Devanahalli Taluk, Bengaluru Rural District;
(2) S.M.Subhan Saheb, the then Assistant Executive Engineer, Panchayath Raj Engineering Sub-Division, Devanahalli Taluk, Bengaluru Rural District; and
(3) Gopal, Junior Engineer, Panchayath Raj Engineering Sub-Division, Devanahalli Taluk, Bengaluru Rural District-reg.

Ref: 1) Government Order No.ಗ್ರಾಅಪ 84 ಇಎನ್‌ಕ್ಯೂ 18, Bengaluru, dated: 16/10/2018.

2) Nomination Order No.UPLOK-2/DE/490/2018, Bengaluru, dated: 30/10/2018 of Upalokayukta, State of Karnataka, Bengaluru.

3) Inquiry Report dated: 29/11/2022 of Additional Registrar of Enquiries-14, Karnataka Lokayukta, Bengaluru.

*****

The Government by its order dated: 16/10/2018 initiated the disciplinary proceedings against (1) Shri Murudaiah.T, the

then Panchayath Development Officer, Yaliyuru Grama Panchayath, Devanahalli Taluk, Bengaluru Rural District; (2) Shri S.M.Subhan Saheb, the then Assistant Executive Engineer, Panchayath Raj Engineering Sub-Division, Devanahalli Taluk, Bengaluru Rural District; and (3) Shri Gopal, Junior Engineer, Panchayath Raj Engineering Sub-Division, Devanahalli Taluk, Bengaluru Rural District (hereinafter referred to as Delinquent Government Official, for short as DGO Nos.1 to 3) and entrusted the Departmental Inquiry to this Institution.

2. This Institution by Nomination Order No.UPLOK-2/DE/490/ 2018, Bengaluru, dated: 30/10/2018 nominated Additional Registrar of Enquiries-14, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGOs No.1 to 3.

3. The DGO No.1, Shri Murudaiah.T, the then Panchayath Development Officer, Yaliyuru Grama Panchayath, Devanahalli Taluk, Bengaluru Rural District; DGO No.2, Shri S.M.Subhan Saheb, the then Assistant Executive Engineer, Panchayath Raj Engineering Sub-Division, Devanahalli Taluk, Bengaluru Rural District; and DGO No.3, Shri Gopal, Junior Engineer,

Panchayath Raj Engineering Sub-Division, Devanahalli Taluk, Bengaluru Rural District were tried for the following charges:

**ಅನುಬಂಧ–1**
**ದೋಷಾರೋಪಣೆ**

ಆಪಾದಿತ ಸರ್ಕಾರಿ ನೌಕರರುಗಳಾದ (1) ಶ್ರೀ. ಮುರುದಯ್ಯಟಿ, ಪಿಡಿಒ, ಯಲಿಯೂರು ಗ್ರಾಮ ಪಂಚಾಯತಿ, (2) ಶ್ರೀ ಸುಭಾನ್ ಸಾಬ್, ಸಹಾಯಕ ಕಾರ್ಯಪಾಲಕ ಅಭಿಯಂತರು, ಮತ್ತು (3)ಶ್ರೀ ಗೋಪಾಲ್, ಕಿರಿಯ ಇಂಜಿನಿಯರ್, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗ, ದೇವನಹಳ್ಳಿ ತಾ., ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಯಲಿಯೂರು ಗ್ರಾಮ ಪಂಚಾಯತಿಯಲ್ಲಿ 2008–09ನೇ ಸಾಲಿನಲ್ಲಿ ಯಲಿಯೂರು ಗ್ರಾಮ ಪಂಚಾಯತಿ ಮೊದಲನೇಯ ಅಂತಸ್ತಿನ ಕಟ್ಟಡದ ಕ್ರಿಯಾ ಯೋಜನೆಯನ್ವಯ ಯಾವುದೇ ಟೆಂಡರ್ ಕರೆಯದೇ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಿ, ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರಿ.

ವಿವಾದಿತ ಕಟ್ಟಡದ ಕಾಮಗಾರಿಯನ್ನು ಉದ್ದೇಶಪೂರ್ವಕವಾಗಿ 3 ಹಂತಗಳಲ್ಲಿ ತೋರಿಸಿರುತ್ತೀರಿ. ಹಾಗೂ ಕಾಂಪೌಂಡ್ ಗೋಡೆ ಮತ್ತು ಶೌಚಾಲಯ ಕಟ್ಟಡವನ್ನು ಸಹ ಉದ್ದೇಶಪೂರ್ವಕವಾಗಿ ಬೇರೆಯಾಗಿ ತೋರಿಸಿ ಕೆಟಿಪಿಪಿ ಕಾಯ್ದೆಯನ್ನು ಉಲ್ಲಂಘಿಸಿದ್ದು, ಕಾಂಪೌಂಡ್ ಗೋಡೆಗಾಗಿ 2 ಬಾರಿ ಬಿಲ್ ಮಾಡಿರುತ್ತೀರಿ. 2ನೇ ಎದುರುದಾರರು ಕಾಮಗಾರಿಯನ್ನು ನಿರ್ವಹಿಸಿದ ಬಗ್ಗೆ ಚೆಕ್ ಮೆಜರ್‌ಮೆಂಟ್ ಮಾಡಿರುವುದಿಲ್ಲ. ಕೆಲವೊಂದು ಬಿಲ್‌ಗಳಿಗೆ ಪಂಚಾಯಿತಿ ಅಧ್ಯಕ್ಷರು ಮಾತ್ರ ಸಹಿ ಮಾಡಿ ಬಿಲ್ ಪಾವತಿಸಿದ್ದು, 1ನೇ ಎದುರುದಾರರ ಸಹಿಯಿಲ್ಲದೆ ಬಿಲ್ ಪಾವತಿಯಾಗಿದ್ದಕ್ಕೆ, 1ನೇ ಎದುರುದಾರರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಕಾಂಪೌಂಡ್ ಕಟ್ಟಡಕ್ಕೆ 1 ಲಕ್ಷ ರೂ ಹಣವನ್ನು ಅಂದಾಜು ಪಟ್ಟಿಯನ್ನು ತಯಾರಿಸಿ ಅದರಂತೆ ಕೆಲಸ ಪೂರ್ಣಗೊಂಡ ನಂತರ ಬಿಲ್ ಪಾವತಿಯಾಗಿದ್ದರೂ ಮತ್ತೆ ಅದೇ ಕಾಮಗಾರಿಗಾಗಿ 2ನೇ ಬಾರಿ 1,59,226.80/– ರೂಗಳ ಬಿಲ್ ಪಾಸಾಗಿರುತ್ತದೆ. ಸದರಿ ಬಿಲ್ ಅನ್ನು ಕಿರಿಯ ಇಂಜಿನಿಯರ್ ಗೋಪಾಲಗೌಡ ಮತ್ತು 1ನೇ ಎದುರುದಾರರು ಪಾಸ್ ಮಾಡಿರುತ್ತಾರೆ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವುಗಳು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

4. The Inquiry Officer (Additional Registrar of Enquiries-14) on proper appreciation of oral and documentary evidence has held that the Disciplinary Authority has **'Not Proved'** the charges

leveled against **DGO No.1**, Shri Murudaiah.T, the then Panchayath Development Officer, Yaliyuru Grama Panchayath, Devanahalli Taluk, Bengaluru Rural District;

**'Partly Proved'** the charges leveled against **DGO No.2**, Shri S.M.Subhan Saheb, the then Assistant Executive Engineer, Panchayath Raj Engineering Sub-Division, Devanahalli Taluk, Bengaluru Rural District; and **DGO No.3**, Shri Gopal, Junior Engineer, Panchayath Raj Engineering Sub-Division, Devanahalli Taluk, Bengaluru Rural District.

5. On perusal of the Inquiry Report, in order to prove the guilt of DGOs No.1 and 2, the Disciplinary Authority has examined two witnesses i.e., PW-1 and PW-2 and Ex. P-1 to P-13 documents were got marked. DGOs No.1 to 3 have examined themselves as DW-2, DW-3 and DW-1 respectively and Ex. D-1 and D-2 documents were got marked.

6. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of the Inquiry Officer.

7. As per the First Oral Statement of DGOs No.1 to 3 furnished by the Inquiry Officer, DGO No.1, Shri Murudaiah.T, has retired from service on 31/12/2021; DGO No.2, Shri S.M.Subhan Saheb will retire from service on 31/05/2024 and DGO No.3, Shri Gopal, has retired from service on 31/05/2020.

8. Having regard to the nature of charge **'Not Proved'** the charges leveled against **DGO No.1**, Shri Murudaiah.T, the then Panchayath Development Officer, Yaliyuru Grama Panchayath, Devanahalli Taluk, Bengaluru Rural District and **'Partly Proved'** the charges leveled against **DGO No.2**, Shri S.M.Subhan Saheb, the then Assistant Executive Engineer, Panchayath Raj Engineering Sub-Division, Devanahalli Taluk, Bengaluru Rural District; and **DGO No.3**, Shri Gopal, Junior Engineer, Panchayath Raj Engineering Sub-Division, Devanahalli Taluk, Bengaluru Rural District and on consideration of the totality of circumstances:-

> "It is hereby recommended to the Government to exonerate DGO No.1, Shri Murudaiah.T, the then Panchayath Development Officer, Yaliyuru Grama Panchayath, Devanahalli Taluk, Bengaluru Rural District of the charges leveled against him".

"It is hereby recommended to the Government to impose penalty of withholding two annual increments payable to DGO No.2, Shri S.M.Subhan Saheb, the then Assistant Executive Engineer, Panchayath Raj Engineering Sub-Division, Devanahalli Taluk, Bengaluru Rural District with cumulative effect and also to recover sum of Rs.1,29,634/- from his salary payable to him".

"It is hereby recommended to the Government to impose penalty of withholding 10% of pension payable to DGO No.3, Shri Gopal, Junior Engineer, Panchayath Raj Engineering Sub-Division, Devanahalli Taluk, Bengaluru Rural District for a period of 1 year and also to recover sum of Rs.1,29,634/- from his pension payable to him".

9. Action taken in the matter shall be intimated to this Authority.

Connected records are enclosed herewith.

30/11/22.

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.

# ಕರ್ನಾಟಕ ಲೋಕಾಯುಕ್ತ

ಸಂ.ಉಪಲೋಕ್-2/ಡಿಇ-490/2018/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 29/11/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ (1) ಶ್ರೀ. **ಮುರುಡಯ್ಯ ಟಿ,** ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಯಲಿಯೂರು ಗ್ರಾಮ ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (2) ಶ್ರೀ. **ಎಸ್.ಎಂ ಸುಭಾನ್ ಸಾಹೇಬ್,** ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (3) ಶ್ರೀ. **ಗೋಪಾಲ್,** ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ/418/2010/ಡಿ.ಆರ್.ಇ-2 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 21/09/2018.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 84 ಇಎನ್‌ಕ್ಯೂ 18, ಬೆಂಗಳೂರು, ದಿನಾಂಕ: 16/10/2018.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/490/2018, ಬೆಂಗಳೂರು ದಿನಾಂಕ: 30/10/2018.

* * * * * *

ಈ ದೂರನ್ನು, ದೂರುದಾರರಾದ **ಶ್ರೀ. ಹನುಮೇಗೌಡ ಎಸ್,** ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ (1) **ಶ್ರೀ. ಮುರುಡಯ್ಯ ಟಿ,** ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಯಲಿಯೂರು ಗ್ರಾಮ ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (2) **ಶ್ರೀ. ಎಸ್.ಎಂ ಸುಭಾನ್ ಸಾಹೇಬ್,** ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (3) **ಶ್ರೀ. ಗೋಪಾಲ್,** ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳ ವಿರುದ್ಧ ಸಲ್ಲಿಸಿರುತ್ತಾರೆ, ತಮ್ಮ ದೂರಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕು ಯಲಿಯೂರು ಗ್ರಾಮ ಪಂಚಾಯತಿಯಲ್ಲಿ 2008-09ನೇ ಸಾಲಿನಲ್ಲಿ ಯಲಿಯೂರು ಗ್ರಾಮ ಪಂಚಾಯತಿ ಮೊದಲನೆಯ ಅಂತಸ್ತಿನ ಕಟ್ಟಡದ ಕ್ರಿಯಾ ಯೋಜನೆಯ ಕಾಮಗಾರಿಯು ಯಾವುದೇ ಟೆಂಡರ್ ಕರೆಯದೇ, ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಿ ಸರ್ಕಾರದ ಹಣವನ್ನು ತಮ್ಮ ಇಚ್ಛೆಯಂತೆ ಬಿಲ್ಲುಗಳನ್ನು ಮಾಡಿಕೊಂಡು ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಅಲ್ಲದೇ, 1ನೇ ಎದುರುದಾರರು (ಆ.ಸ.ನೌ-1) ಇವರು ನರೇಗಾ ಯೋಜನೆ ಅಡಿಯಲ್ಲಿ ಸುಮಾರು ಸಾವಿರಕ್ಕೂ ಹೆಚ್ಚು ಜಾಬ್ ಕಾರ್ಡ್ ವಿತರಣೆ ಮಾಡಿ ಕಾರ್ಮಿಕರ ಸಹಿಯನ್ನು ತಾವೇ ಬೋಗಸ್ ಮಾಡಿಕೊಂಡು ಸ್ಥಳೀಯ ಸಹಕಾರ ಬ್ಯಾಂಕಿನಿಂದ ಹಣ ಡ್ರಾ ಮಾಡಿಕೊಂಡಿರುತ್ತಾರೆ. ಅಲ್ಲದೇ ಸದರಿ ಯೋಜನೆ ಅಡಿಯಲ್ಲಿ ಕೆಲಸಗಳನ್ನು ಜೆ.ಸಿ.ಬಿ ಮತ್ತು ಟ್ಯಾಂಕರ್‌ಗಳ ಮೂಲಕ ಮಾಡಿಸಿ ಹಣ ದುರುಪಯೋಗ ಮಾಡಿಕೊಂಡಿರುತ್ತಾರೆ ಅಂತಾ ಆಪಾದಿಸಿರುತ್ತಾರೆ.

ನಂತರ ಸದರಿ ದೂರನ್ನು ಆಪಾದಿಸಿದ ವಿಷಯದ ಬಗ್ಗೆ ತನಿಖೆಯನ್ನು ಮಾಡಿ ತನಿಖಾ ವರದಿಯನ್ನು ಸಲ್ಲಿಸಲು ಮುಖ್ಯ ಅಭಿಯಂತರರು (ತಾಂತ್ರಿಕ ವಿಭಾಗ), ಕರ್ನಾಟಕ ಲೋಕಾಯುಕ್ತ ಇವರಿಗೆ ವಹಿಸಿದ್ದು, ಸಹಾಯಕ ಅಭಿಯಂತರರು-2 ಇವರು ತನಿಖೆಯನ್ನು ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 16/10/2018ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ವಹಿಸಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 30/10/2018 ರಂದು ಅಪರ ನಿಬಂಧಕರು, ವಿಚಾರಣೆಗಳು-14 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು ಇರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, **ಆ.ಸ.ನೌ ರವರುಗಳ ವಿರುದ್ಧ ದೋಷಾರೋಪಣೆ *(Articles of Charge)* ಅನ್ನು, ಅಪರ ನಿಬಂಧಕರು, ವಿಚಾರಣೆಗಳು-14 ರವರು ರಚಿಸಿದ್ದು,** ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರುಗಳಿಗೆ ದಿನಾಂಕ: 10/05/2019 ರಂದು ಕಳುಹಿಸಲಾಗಿರುತ್ತದೆ.

## ಅನುಬಂಧ-1

## ದೋಷಾರೋಪಣೆ

2. ಆಪಾದಿತ ಸರ್ಕಾರಿ ನೌಕರರುಗಳಾದ (1) ಶ್ರೀ. ಮುರುದಯ್ಯ.ಟಿ, ಪಿಡಿಒ, ಯಲಿಯೂರು ಗ್ರಾಮ ಪಂಚಾಯತಿ, (2) ಶ್ರೀ ಸುಭಾನ್ ಸಾಬ್, ಸಹಾಯಕ ಕಾರ್ಯಪಾಲಕ ಅಭಿಯಂತರು, ಮತ್ತು (3)ಶ್ರೀ ಗೋಪಾಲ್, ಕಿರಿಯ ಇಂಜಿನಿಯರ್, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗ, ದೇವನಹಳ್ಳಿ ತಾ., ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಯಲಿಯೂರು ಗ್ರಾಮ ಪಂಚಾಯತಿಯಲ್ಲಿ 2008-09ನೇ ಸಾಲಿನಲ್ಲಿ ಯಲಿಯೂರು ಗ್ರಾಮ ಪಂಚಾಯತಿ ಮೊದಲನೇಯ ಅಂತಸ್ತಿನ

ಕಟ್ಟಡದ ಕ್ರಿಯಾ ಯೋಜನೆಯನ್ವಯ ಯಾವುದೇ ಟೆಂಡರ್ ಕರೆಯದೇ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಿ, ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರಿ.

3. ವಿವಾದಿತ ಕಟ್ಟಡದ ಕಾಮಗಾರಿಯನ್ನು ಉದ್ದೇಶಪೂರ್ವಕವಾಗಿ 3 ಹಂತಗಳಲ್ಲಿ ತೋರಿಸಿರುತ್ತೀರಿ. ಹಾಗೂ ಕಾಂಪೌಂಡ್ ಗೋಡೆ ಮತ್ತು ಶೌಚಾಲಯ ಕಟ್ಟಡವನ್ನು ಸಹ ಉದ್ದೇಶಪೂರ್ವಕವಾಗಿ ಬೇರೆಯಾಗಿ ತೋರಿಸಿ ಕೆಟಿಪಿಪಿ ಕಾಯ್ದೆಯನ್ನು ಉಲ್ಲಂಘಿಸಿದ್ದು, ಕಾಂಪೌಂಡ್ ಗೋಡೆಗಾಗಿ 2 ಬಾರಿ ಬಿಲ್ ಮಾಡಿರುತ್ತೀರಿ. 2ನೇ ಎದುರುದಾರರು ಕಾಮಗಾರಿಯನ್ನು ನಿರ್ವಹಿಸಿದ ಬಗ್ಗೆ ಚೆಕ್ ಮೆಜರ್‌ಮೆಂಟ್ ಮಾಡಿರುವುದಿಲ್ಲ. ಕೆಲವೊಂದು ಬಿಲ್‌ಗಳಿಗೆ ಪಂಚಾಯಿತಿ ಅಧ್ಯಕ್ಷರು ಮಾತ್ರ ಸಹಿ ಮಾಡಿ ಬಿಲ್ ಪಾವತಿಸಿದ್ದು, 1ನೇ ಎದುರುದಾರರ ಸಹಿಯಿಲ್ಲದೆ ಬಿಲ್ ಪಾವತಿಯಾಗಿದ್ದಕ್ಕೆ, 1ನೇ ಎದುರುದಾರರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಕಾಂಪೌಂಡ್ ಕಟ್ಟಡಕ್ಕೆ 1 ಲಕ್ಷ ರೂ ಹಣವನ್ನು ಅಂದಾಜು ಪಟ್ಟಿಯನ್ನು ತಯಾರಿಸಿ ಅದರಂತೆ ಕೆಲಸ ಪೂರ್ಣಗೊಂಡ ನಂತರ ಬಿಲ್ ಪಾವತಿಯಾಗಿದ್ದರೂ ಮತ್ತೆ ಅದೇ ಕಾಮಗಾರಿಗಾಗಿ 2ನೇ ಬಾರಿ 1,59,226.80/- ರೂಗಳ ಬಿಲ್ ಪಾಸಾಗಿರುತ್ತದೆ. ಸದರಿ ಬಿಲ್ ಅನ್ನು ಕಿರಿಯ ಇಂಜಿನಿಯರ್ ಗೋಪಾಲಗೌಡ ಮತ್ತು 1ನೇ ಎದುರುದಾರರು ಪಾಸ್ ಮಾಡಿರುತ್ತಾರೆ.

4. ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವುಗಳು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ–2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

5. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಯಲಿಯೂರು ಗ್ರಾಮ ಪಂಚಾಯತಿಯಲ್ಲಿ 2008–09ನೇ ಸಾಲಿನಲ್ಲಿ ಯಲಿಯೂರು ಗ್ರಾಮ ಪಂಚಾಯಿತಿ ಮೊದಲನೇಯ ಅಂತಸ್ತಿನ ಕಟ್ಟಡದ ಕ್ರಿಯಾ ಯೋಜನೆಯ ಕಾಮಗಾರಿಯ ಯಾವುದೇ ಟೆಂಡರ್ ಕರೆಯದೆ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಿ, ಸರ್ಕಾರದ ಹಣವನ್ನು ಮನೋ ಇಚ್ಛೆಯಂತೆ ಬಿಲ್‌ಗಳನ್ನು ಮಾಡಿಕೊಂಡು ಎದುರುದಾರರು ಹಣ ದುರುಪಯೋಗಪಡಿಸಿಕೊಂಡಿರುತ್ತಾರೆಂದು, ಮತ್ತು 1ನೇ ಎದುರುದಾರರು ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಸುಮಾರು ಸಾವಿರಕ್ಕೂ ಹೆಚ್ಚು ಜಾಬ್ ಕಾರ್ಡ್ ವಿತರಣೆ ಮಾಡಿ ಕಾರ್ಮಿಕರ ಸಹಿಯನ್ನು ತಾವೇ ಬೋಗಸ್ ಮಾಡಿಕೊಂಡು ಸ್ಥಳೀಯ ಸಹಕಾರ ಬ್ಯಾಂಕಿನಿಂದ ಹಣ ಡ್ರಾ ಮಾಡಿಕೊಂಡಿರುತ್ತಾರೆ, ಹಾಗೂ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕೆಲಸಗಳನ್ನು ಜೆಸಿಬಿ ಮತ್ತು ಟ್ಯಾಂಕರ್‌ಗಳ ಮೂಲಕ ಮಾಡಿಸಿ ಹಣ ದುರುಪಯೋಗ ಮಾಡಿಕೊಂಡಿರುತ್ತಾರೆಂದು ಆಪಾದಿಸಿರುತ್ತಾರೆ.

6. ದೂರಿನ ಜೊತೆಗೆ 2008–09ನೇ ಸಾಲಿನ ಯಲಿಯೂರು ಗ್ರಾಮ ಪಂಚಾಯಿತಿ ಮೊದಲನೆ ಅಂತಸ್ತಿನ ಕಟ್ಟಡದ ಕ್ರಿಯಾ ಯೋಜನೆಯ, ಅಂದಾಜು ಪಟ್ಟಿಯ ಮತ್ತು ಅಳತೆ ಪುಸ್ತಕದ ಜೆರಾಕ್ಸ್ ಪ್ರತಿಗಳನ್ನು, ಸದರಿ ಗ್ರಾಮ ಪಂಚಾಯಿತಿ ಕಾಂಪೌಂಡ್ ಕಟ್ಟಡದ ಕ್ರಿಯಾ ಯೋಜನೆಯ ಜೆರಾಕ್ಸ್ ಪ್ರತಿ, ಅಂದಾಜು ಪಟ್ಟಿಯ ಜೆರಾಕ್ಸ್ ಪ್ರತಿ, ಮತ್ತು ಸದರಿ ಗ್ರಾಮ ಪಂಚಾಯಿತಿ ಹಿಂಭಾಗದಲ್ಲಿ ಶೌಚಾಲಯ ನಿರ್ಮಾಣದ

ಅಂದಾಜು ಪಟ್ಟಿಯ ಜೆರಾಕ್ಸ್ ಪ್ರತಿ, ತುಂಡು ಗುತ್ತಿಗೆಗಾಗಿ ಮಾಡಿಕೊಂಡ ಕರಾರು ಪತ್ರದ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

7. ಈ ಪ್ರಕರಣದ ದೂರಿನಲ್ಲಿ ಎದುರುದಾರರು ಪಂಚಾಯಿತಿ ಕಟ್ಟಡದ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆಂದು ಮತ್ತು ಕಾಮಗಾರಿಯನ್ನು ನಿರ್ದಿಷ್ಟ ಪಡಿಸಿದಂತೆ ನಿರ್ವಹಿಸಿಲ್ಲ, ಹಾಗೂ ಎದುರುದಾರರು ಕರ್ತವ್ಯ ನಿರ್ಲಕ್ಷತೆಯನ್ನು ತೋರಿದ್ದಾರೆಂದು ಆಪಾದಿಸಿರುವುದರಿಂದ, ಈ ಪ್ರಕರಣವನ್ನು ಮುಖ್ಯ ಇಂಜಿನಿಯರ್(ತಾಂತ್ರಿಕ ವಿಭಾಗ), ಕರ್ನಾಟಕ ಲೋಕಾಯುಕ್ತ ಇವರಿಗೆ ವಹಿಸಿ ವಿವಾದಿತ ಕಟ್ಟಡದ ಸಂಪೂರ್ಣ ತನಿಖೆ ಮಾಡಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

8. ಅದರಂತೆ, ಮುಖ್ಯ ಇಂಜಿನಿಯರ್(ತಾಂತ್ರಿಕ ವಿಭಾಗ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಈ ಪ್ರಕರಣದ ತನಿಖೆಯನ್ನು ಸಹಾಯಕ ಇಂಜಿನಿಯರ್-2, ಶ್ರೀಮತಿ ಎಂ. ನಾಗರತ್ನ ರವರ ಮೂಲಕ ತನಿಖೆ ಮಾಡಿಸಿ ತನಿಖಾ ವರದಿಯನ್ನು ದಿನಾಂಕ. 10.11.2017 ರಂದು ಸಲ್ಲಿಸಿದ್ದು, ತನಿಖಾ ವರದಿಯಲ್ಲಿ 1 ರಿಂದ 3ನೇ ಎದುರುದಾರರ ವಿರುದ್ಧ ಆಪಾದಿನೆಗಳು ಸಾಬೀತಾಗಿವೆ. ವಿವಾದಿತ ಕಟ್ಟಡದ ಕಾಮಗಾರಿಯನ್ನು ಉದ್ದೇಶಪೂರ್ವಕವಾಗಿ 3 ಹಂತಗಳಲ್ಲಿ ತೋರಿಸಿರುತ್ತಾರೆ. ಹಾಗೂ ಕಾಂಪೌಂಡ್ ಗೋಡೆ ಮತ್ತು ಶೌಚಾಲಯ ಕಟ್ಟಡವನ್ನು ಸಹ ಉದ್ದೇಶಪೂರ್ವಕವಾಗಿ ಬೇರೆಯಾಗಿ ತೋರಿಸಿ ಕೆಟಿಪಿಪಿ ಕಾಯ್ದೆಯನ್ನು ಉಲ್ಲಂಘಿಸಿರುತ್ತಾರೆ. ಕಾಂಪೌಂಡ್ ಗೋಡೆಗಾಗಿ 2 ಬಾರಿ ಬಿಲ್ ಮಾಡಿರುತ್ತಾರೆ. 2ನೇ ಎದುರುದಾರರು ಕಾಮಗಾರಿಯನ್ನು ನಿರ್ವಹಿಸಿದ ಬಗ್ಗೆ ಚೆಕ್ ಮೆಜರ್‌ಮೆಂಟ್ ಮಾಡಿರುವುದಿಲ್ಲ. ಕೆಲವೊಂದು ಬಿಲ್‌ಗಳಿಗೆ ಪಂಚಾಯಿತಿ ಅಧ್ಯಕ್ಷರು ಮಾತ್ರ ಸಹಿ ಮಾಡಿ ಬಿಲ್ ಪಾವತಿಸಿರುತ್ತಾರೆ. 1ನೇ ಎದುರುದಾರರ ಸಹಿಯಿಲ್ಲದೆ ಬಿಲ್ ಪಾವತಿಯಾಗಿದ್ದಕ್ಕೆ, 1ನೇ ಎದುರುದಾರರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಕಾಂಪೌಂಡ್ ಕಟ್ಟಡಕ್ಕೆ 1 ಲಕ್ಷ ರೂ ಹಣವನ್ನು ಅಂದಾಜು ಪಟ್ಟಿಯನ್ನು ತಯಾರಿಸಿ ಅದರಂತೆ ಕೆಲಸ ಪೂರ್ಣಗೊಂಡ ನಂತರ ಬಿಲ್ ಪಾವತಿಯಾಗಿದ್ದರೂ ಮತ್ತೆ ಅದೇ

ಕಾಮಗಾರಿಗಾಗಿ 2ನೇ ಬಾರಿ 1,59,226.80/- ರೂಗಳ ಬಿಲ್ ಪಾಸಾಗಿರುತ್ತದೆ. ಸದರಿ ಬಿಲ್ ಅನ್ನು ಕಿರಿಯ ಇಂಜಿನಿಯರ್ ಗೋಪಾಲಗೌಡ ಮತ್ತು 1ನೇ ಎದುರುದಾರರು ಪಾಸ್ ಮಾಡಿರುತ್ತಾರೆ. ಆದ್ದರಿಂದ ಎದುರುದಾರರು ಸದರಿ ನಷ್ಟವನ್ನು ಪಾವತಿಸಲು ಕಾರಣರಾಗಿರುತ್ತಾರೆ ಎಂದು ತನಿಖಾಧಿಕಾರಿಗಳು ಅಭಿಪ್ರಾಯ ಪಟ್ಟಿರುತ್ತಾರೆ.

9. ತನಿಖಾಧಿಕಾರಿಗಳು ಸಲ್ಲಿಸಿದ ವರದಿಯ ಮೇಲೆ ಎದುರುದಾರರಿಗೆ ತನಿಖಾ ವರದಿಯ ಪ್ರತಿಯನ್ನು ಮತ್ತು ದೂರಿನ ಪ್ರತಿಯನ್ನು ಕಳುಹಿಸಿಕೊಟ್ಟು ಅವರಿಂದ ಆಕ್ಷೇಪಣೆಗಳನ್ನು ಕೇಳಲಾಯಿತು.

ಅ) ದಿನಾಂಕ.25.04.2018 ರಂದು 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದಾರೆ. ಆದರೆ 2 ಮತ್ತು 3ನೇ ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿಲ್ಲ.

ಆ) 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತನಿಖಾಧಿಕಾರಿಗಳ ವರದಿಯನ್ನು ಮತ್ತು ದೂರಿನಲ್ಲಿರುವ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ. ಆರೋಪಿತ ಕಟ್ಟಡವನ್ನು 2008-09 ರಲ್ಲಿ ನಿರ್ಮಾಣ ಕಾರ್ಯ ಕೈಗೊಂಡಿದ್ದು ಮತ್ತು 2010ರಲ್ಲಿ ಕಟ್ಟಡ ಪೂರ್ಣಗೊಂಡಿರುತ್ತದೆ. 2008-09ನೇ ಸಾಲಿನ ಯಲಿಯೂರು ಗ್ರಾಮ ಪಂಚಾಯಿತಿಯಲ್ಲಿ ದಿನಾಂಕ. 29.05.2008 ರಂದು ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಕಟ್ಟಡದ ಅನುಮೋದಿತ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಲು ಪಂಚಾಯತ್‌ರಾಜ್ ಇಂಜಿನಿಯರ್ ಉಪವಿಭಾಗ, ದೇವನಹಳ್ಳಿ ಇವರಿಗೆ ವರ್ಗಾವಣೆ ಮಾಡಲಾಯಿತು. ತಾಂತ್ರಿಕ ಅನುಷ್ಠಾನಾಧಿಕಾರಿಗಳು ಕೆಟಿಪಿಪಿ ಕಾಯ್ದೆಯನ್ವಯ ಕಾಮಗಾರಿ ನಿರ್ವಹಿಸಲು ಕ್ರಮವಹಿಸಬೇಕಾಗಿತ್ತು ಎಂದು ತಿಳಿಸಿದ್ದಾರೆ. ಸದರಿ ಕಾಮಗಾರಿಯಲ್ಲಿ ತಾವು ಯಾವುದೇ ಅವ್ಯವಹಾರ ಅಥವಾ ಕರ್ತವ್ಯಲೋಪವೆಸಗಿರುವುದಿಲ್ಲ. ಆದ್ದರಿಂದ ತಮ್ಮನ್ನು ಕೈಬಿಡಬೇಕೆಂದು ಕೋರಿಕೊಂಡಿರುತ್ತಾರೆ.

ಇ) ಎದುರುದಾರರು ತಮ್ಮ ಆಕ್ಷೇಪಣೆ ಜೊತೆಗೆ ಡಿ.ಸಿ ಬಿಲ್‌ನ ಜೆರಾಕ್ಸ್ ಪ್ರತಿಗಳನ್ನು, ಪಂಚಾಯತಿ ಮೊದಲನೆ ಅಂತಸ್ತಿನ ಕಟ್ಟಡದ

8

ಕ್ರಿಯಾ ಯೋಜನೆಯ ಜೆರಾಕ್ಸ್ ಪ್ರತಿಯನ್ನು, ಕಾಂಪೌಂಡ್ ಗೋಡೆಯ ಕಂಪ್ಲೀಷನ್ ಸರ್ಟಿಫಿಕೇಟ್, ಅಳತೆ ಪುಸ್ತಕದ ಜೆರಾಕ್ಸ್ ಪ್ರತಿಗಳನ್ನು, ಶೌಚಾಲಯ ನಿರ್ಮಾಣದ ಅಂದಾಜು ಪಟ್ಟಿಯ ಜೆರಾಕ್ಸ್ ಪ್ರತಿಯನ್ನು, ಗುತ್ತಿಗೆ ಕರಾರು ಪತ್ರದ ಜೆರಾಕ್ಸ್ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

10. ತನಿಖಾಧಿಕಾರಿಗಳು ಸ್ಥಳ ತನಿಖೆ ಕೈಗೊಳ್ಳುವ ಪೂರ್ವದಲ್ಲಿ ದೇವನಹಳ್ಳಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿಗಳಿಂದ ದೂರಿನಲ್ಲಿ ಮಾಡಲಾದ ಆರೋಪಿತ ಕಾಮಗಾರಿಗಳ ಕುರಿತು ಅಳತೆಗಳನ್ನು ದಾಖಲಿಸಿರುವ ಅಳತೆ ಪುಸ್ತಕದ ದೃಢೀಕರಣ ಪ್ರತಿಯೊಂದಿಗೆ ಇತರೆ ದಾಖಲೆಗಳ ಸಮೇತ ವಿವರವಾದ ವರದಿಯನ್ನು ಸಲ್ಲಿಸಲು ದಿನಾಂಕ.10.01.2011ರಂದು ಪತ್ರ ಬರೆದಿದ್ದರು. ಅದರಂತೆ ದಿನಾಂಕ.03.02.2011 ರಂದು ದೇವನಹಳ್ಳಿ ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಹಣಾಧಿಕಾರಿಗಳು ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ.

11. ದೇವನಹಳ್ಳಿ ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಹಣಾಧಿಕಾರಿಗಳು ಕಾಮಗಾರಿಯ ಬಿಲ್ ಪಾವತಿಸುವಾಗ ಗ್ರಾಮ ಪಂಚಾಯಿತಿಯಿಂದ ನೇರವಾಗಿ ಬಿಲ್ ಪಾವತಿಸಿರುತ್ತಾರೆ, ಆದರೆ 2ನೇ ಎದುರುದಾರರಿಂದ ಚೆಕ್ ಮೆಷರ್‌ಮೆಂಟ್ ಪಡೆದಿರುವುದು ಕಂಡು ಬರುವುದಿಲ್ಲ, ಗ್ರಾಮ ಪಂಚಾಯಿತಿಯ ಆಯವ್ಯಯ ಮತ್ತು ಲೆಕ್ಕ ಪತ್ರಗಳು ನಿಯಮ 2006ರ ಕಲಂ 86ರಂತೆ ರೂ.25 ಸಾವಿರಕ್ಕಿಂತ ಮೇಲ್ಪಟ್ಟು ಮೌಲ್ಯಕ್ಕೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರಿಂದ ಸಹಿ ಪಡೆದು ಬಿಲ್ ಪಾವತಿಗೆ ಕ್ರಮವಹಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. (1) ಡಿ.ಸಿ ಬಿಲ್ ನಂ.15/2009-10, ದಿನಾಂಕ.27.07.2009 ರೂ.86.644/- (2) ಡಿ.ಸಿ ಬಿಲ್ ನಂ.16/2009-10, ದಿನಾಂಕ.27.06.2009 ರೂ.2,69,693/- ಮತ್ತು (3) ಡಿ.ಸಿ ಬಿಲ್ ನಂ.39/2009-10 ದಿನಾಂಕ.26.09.2010 ರೂ 3,00,000/- ಬಿಲ್‌ಗಳು ಕ್ರಮಬದ್ಧವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಆಪಾದಿತ ಕಾಮಗಾರಿಗಳ

ಅಂದಾಜು ಪಟ್ಟಿ ಮತ್ತು ಅಳತೆ ಪುಸ್ತಕದ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತಾರೆ.

12. ತನಿಖಾಧಿಕಾರಿಗಳು ದಿನಾಂಕ.13.04.2017 ರಿಂದ 18.04.2017ರವರೆಗೆ ಸ್ಥಳ ತನಿಖೆಯನ್ನು ಮಾಡಿ ವರದಿಯನ್ನು ದಿನಾಂಕ.10.11.2017 ರಂದು ಸಲ್ಲಿಸಿದ್ದಾರೆ. ಸ್ಥಳ ತನಿಖೆಯ ಸಮಯದಲ್ಲಿ ದೂರುದಾರರು, 2 ಮತ್ತು 3ನೇ ಎದುರುದಾರರು ಹಾಗೂ ಇನ್ನೊಬ್ಬ ಕಿರಿಯ ಇಂಜಿನಿಯರ್ ಆದ ಶ್ರೀಮತಿ ನಾಸಿರಾ ರವರು ಹಾಜರಿದ್ದರೆಂದು ಮತ್ತು 1ನೇ ಎದುರುದಾರರು ಗೈರುಹಾಜರಿದ್ದರು ಎಂದು ತಿಳಿಸಿರುತ್ತಾರೆ.

13. ತನಿಖಾಧಿಕಾರಿಗಳು ತಮ್ಮ ವರದಿಯ ಕಂಡಿಕೆ-4ರಲ್ಲಿ ಆರೋಪಿತ ಕಾಮಗಾರಿಗಳು 2008-09ರ ನಿಧಿ(2) ಲೆಕ್ಕ ಶೀರ್ಷಿಕೆಯಡಿ ಅನುದಾನದ ಕ್ರಿಯಾ ಯೋಜನೆಯಲ್ಲಿ 13,60,000/- ರೂ ಮೊತ್ತಕ್ಕೆ ಅನುಮೋದನೆಗೊಂಡಿದ್ದು, ಈ ಯೋಜನೆಯಲ್ಲಿ ಈ ಕೆಳಕಂಡಂತೆ 5 ಕಾಮಗಾರಿಗಳಾಗಿರುತ್ತವೆ ಎಂದು ತಿಳಿಸಿರುತ್ತಾರೆ.

ಅ. ಪಂಚಾಯಿತಿ ಕಟ್ಟಡದ ಮೊದಲನೆ ಅಂತಸ್ತಿನ ಮೊದಲನೆ ಹಂತದ ಕಾಮಗಾರಿಗಾಗಿ ಅಂದಾಜು ವೆಚ್ಚ 4 ಲಕ್ಷ ರೂ.

ಆ. ಪಂಚಾಯಿತಿ ಕಟ್ಟಡದ ಮೊದಲನೆ ಅಂತಸ್ತಿನ 2ನೇ ಹಂತದ ಕಾಮಗಾರಿಗಾಗಿ ಅಂದಾಜು ವೆಚ್ಚ 4 ಲಕ್ಷ ರೂ.

ಇ. ಪಂಚಾಯಿತಿ ಕಟ್ಟಡದ ಮೊದಲನೆ ಅಂತಸ್ತಿನ 3ನೇ ಹಂತದ ಕಾಮಗಾರಿಗಾಗಿ ಅಂದಾಜು ವೆಚ್ಚ 4 ಲಕ್ಷ ರೂ.

ಈ. ಗ್ರಾಮ ಪಂಚಾಯಿತಿ ಕಟ್ಟಡದ ಕಾಂಪೌಂಡ್ ಕಾಮಗಾರಿಗಾಗಿ ಅಂದಾಜು ವೆಚ್ಚ 1 ಲಕ್ಷ ರೂ.

ಉ. ಗ್ರಾಮ ಪಂಚಾಯಿತಿ ಹಿಂಭಾಗದ ಶೌಚಾಲಯದ ಕಾಮಗಾರಿ ಕ್ರಿಯಾ ಯೋಜನೆಯ ಅಂದಾಜು ವೆಚ್ಚ ರೂ. 60,000/- ಆಗಿತ್ತೆಂದು ತಿಳಿಸಿರುತ್ತಾರೆ.

14. ತನಿಖಾಧಿಕಾರಿಗಳು ಮುಂದುವರೆದು ಸದರಿ ಕಾಮಗಾರಿಯನ್ನು 3ನೇ ದರ್ಜೆಯ ಗುತ್ತಿಗೆದಾರರಾದ ಶ್ರೀ ಗೋಪಾಲಗೌಡರು, ಧರ್ಮಪುರ ಗ್ರಾಮ, ದೇವನಹಳ್ಳಿ

ಎಂಬುವವರೊಂದಿಗೆ ಒಪ್ಪಂದ ಮಾಡಿಕೊಂಡು ಅನುಷ್ಠಾನಗೊಳಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಸದರಿ ಕಾಮಗಾರಿಗಳ ಗುತ್ತಿಗೆ ನೀಡುವ ಪೂರ್ವದಲ್ಲಿ ಕೆಟಿಪಿಪಿ ಕಾಯ್ದೆಯನ್ನು ಪಾಲಿಸಿರುವುದಿಲ್ಲ. ಅದೇ ರೀತಿ ಮೇಲಿನ ಕಾಮಗಾರಿಗಳ ಗುತ್ತಿಗೆ ನೀಡುವ ಪೂರ್ವದಲ್ಲಿ ದರ ಪಟ್ಟಿಯನ್ನು ಕೂಡ ಕರೆದಿರುವುದಿಲ್ಲ ಎಂದು ತಿಳಿಸಿರುತ್ತಾರೆ.

15. ದೂರುದಾರರು ದೂರಿನಲ್ಲಿ 1ನೇ ಎದುರುದಾರರು ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಸುಮಾರು ಸಾವಿರಕ್ಕೂ ಹೆಚ್ಚು ಜಾಬ್ ಕಾರ್ಡ್ ವಿತರಣೆ ಮಾಡಿ ಕಾರ್ಮಿಕರ ಸಹಿಯನ್ನು 1ನೇ ಎದುರುದಾರರೇ ಬೋಗಸ್ ಮಾಡಿಕೊಂಡು ಸಹಕಾರಿ ಬ್ಯಾಂಕ್‌ನಿಂದ ಹಣ ಡ್ರಾ ಮಾಡಿಕೊಂಡಿರುತ್ತಾರೆ ಎಂದು ಮತ್ತು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೆಲಸಗಳನ್ನು ಜೆಸಿಬಿ ಮತ್ತು ಟ್ಯಾಂಕರ್ ಮೂಲಕ ಮಾಡಿಸಿರುತ್ತಾರೆಂದು ಆಪಾದಿಸಿರುತ್ತಾರೆ. ಆದರೆ ತನಿಖೆಯ ಸಮಯದಲ್ಲಿ ದೂರುದಾರರು ಸದರಿ ಆಪಾದನೆಗೆ ಸಂಬಂಧಿಸಿದಂತೆ ಯಾವುದೇ ಪುರಾವೆಯನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಸದರಿ ಆಪಾದನೆ ಸಾಬೀತಾಗಿರುವುದಿಲ್ಲವೆಂದು ತನಿಖಾಧಿಕಾರಿಗಳು ಅಭಿಪ್ರಾಯಪಟ್ಟಿರುತ್ತಾರೆ.

16. ದೂರು, ತನಿಖಾಧಿಕಾರಿಯವರ ವರದಿ, 1ನೇ ಎದುರುದಾರರ ಆಕ್ಷೇಪಣೆ, ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿಯವರ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಂದಾಜು ಪಟ್ಟಿಗಳಿಂದ ಯಲಿಯೂರು ಗ್ರಾಮ ಪಂಚಾಯಿತಿಯ ಕಟ್ಟಡದ ಮೊದಲನೆ ಅಂತಸ್ತಿನ ಕಾಮಗಾರಿಯ ಕ್ರಿಯಾ ಯೋಜನೆಯನ್ನು ರೂ. 12 ಲಕ್ಷ ಮೊತ್ತಕ್ಕೆ ತಯಾರಿಸಿದ್ದು, ಕಾಂಪೌಂಡ್ ಗೋಡೆಯ ನಿರ್ಮಾಣದ ಕ್ರಿಯಾ ಯೋಜನೆಯನ್ನು ರೂ.1 ಲಕ್ಷ ಮೊತ್ತಕ್ಕೆ ತಯಾರಿಸಿದ್ದು ಮತ್ತು ಶೌಚಾಲಯ ನಿರ್ಮಾಣದ ಕ್ರಿಯಾ ಯೋಜನೆಯನ್ನು ರೂ.60 ಸಾವಿರ ಮೊತ್ತಕ್ಕೆ ತಯಾರಿಸಿದ್ದು ಕಂಡು ಬರುತ್ತದೆ. ಅದರಂತೆ ತಾಂತ್ರಿಕ ಮಂಜೂರಾತಿಯನ್ನು ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಎದುರುದಾರರು ಪಡೆದುಕೊಂಡಿರುತ್ತಾರೆ. ಆದರೆ ಕೆಟಿಪಿಪಿ ಕಾಯ್ದೆಯಿಂದ ತಪ್ಪಿಸಿಕೊಳ್ಳಲು ಉದ್ದೇಶಪೂರ್ವಕವಾಗಿ ಮೊದಲನೆ

ಅಂತಸ್ತಿನ ಕಾಮಗಾರಿಯಲ್ಲಿ (1) ಹಾಲ್‌ಗಾಗಿ (2) ರೂಮಿಗಾಗಿ (3)ಕಂಪ್ಯೂಟರ್ ರೂಮಿಗಾಗಿ 3 ವಿಭಜನೆ ಮಾಡಿ ತಲಾ ಕಾಮಗಾರಿಗೆ 4 ಲಕ್ಷ ರೂ ಮೊತ್ತವೆಂದು ತೋರಿಸಿರುತ್ತಾರೆ. ಆದರೆ ಕಾಮಗಾರಿಯ ಕ್ರಿಯಾ ಯೋಜನೆಯ ಅನುಮೋದನೆಯನ್ನು ಪಡೆಯುವಾಗ 3 ಭಾಗಗಳಾಗಿ ಮಾಡಿರುವುದಿಲ್ಲ. ಎದುರುದಾರರು ಒಂದೇ ಕಾಮಗಾರಿಯನ್ನು 3 ವಿಭಾಗ ಮಾಡಿ ಕೆಟಿಪಿಪಿ ಕಾಯ್ದೆಯನ್ನು ಉಲ್ಲಂಘನೆ ಮಾಡಿ ಕರ್ತವ್ಯಲೋಪ ಮತ್ತು ದುರ್ನಡತೆಯನ್ನು ಎಸಗಿದ್ದಾರೆ.

17. ಕಾಂಪೌಂಡ್ ಗೋಡೆಗಾಗಿ 1 ಲಕ್ಷ ರೂ ಮೊತ್ತದ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಮೋದನೆ ಪಡೆದಿದ್ದು ಇರುತ್ತದೆ. ಆದರೆ ಸದರಿ ಕಾಂಪೌಂಡ್ ಗೋಡೆ ನಿರ್ಮಾಣದ ಕಾಮಗಾರಿಗಾಗಿ ಎದುರುದಾರರು ಒಟ್ಟು ರೂ. 2,69,267.95/– ಹಣ ಡ್ರಾ ಮಾಡಿದ್ದು ಇರುತ್ತದೆ. ಆದ್ದರಿಂದ ರೂ. 1,59,268/– ಹಣವನ್ನು ಹೆಚ್ಚಿಗೆ ಡ್ರಾ ಮಾಡಿದ್ದು ಕಂಡು ಬರುತ್ತದೆ.

18. ಎದುರುದಾರರು ಕಾಮಗಾರಿಗಳನ್ನು ವಿಭಜಿಸಿ ಕಟ್ಟಡದ ಕೆಲಸವನ್ನು ಕೈಗೊಂಡಿದ್ದರೂ ಕೂಡ ದರ ಪಟ್ಟಿಯನ್ನು ಕರೆದಿರುವುದಿಲ್ಲ. ಒಬ್ಬನೆ ಗುತ್ತಿಗೆದಾರರಾದ ಎಂ.ಗೋಪಾಲಗೌಡ ರವರಿಗೆ ಗುತ್ತಿಗೆ ಕೆಲಸವನ್ನು ನೀಡಿದ್ದು ಕಾನೂನುಬಾಹಿರವಾಗಿರುತ್ತದೆ. ಗುತ್ತಿಗೆದಾರ ಎಂ.ಗೋಪಾಲಗೌಡನಿಗೆ ಯಾವ ಯಾವ ದಿನಾಂಕದಂದು 5 ಕಾಮಗಾರಿಗಳನ್ನು ಮಾಡಲು ಕಾರ್ಯಾದೇಶವನ್ನು ನೀಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. 5 ಕಾಮಗಾರಿಗಳ ಬಗ್ಗೆ ಯಾವ ಯಾವ ದಿನಾಂಕದಂದು ಕರಾರು ಮಾಡಿಕೊಳ್ಳಲಾಯಿತು ಹಾಗೂ ಎಷ್ಟು ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕೆಂದು ತಿಳಿಸಿರುವುದಿಲ್ಲ. ಎದುರುದಾರರು ಹಾಜರುಪಡಿಸಿದ ಗುತ್ತಿಗೆ ಕರಾರು ಪತ್ರಗಳಲ್ಲಿ ಕರಾರು ಮಾಡಿಕೊಂಡ ದಿನಾಂಕವನ್ನು ನಮೂದಿಸಿರುವುದಿಲ್ಲ. ಆದ್ದರಿಂದ ಸದರಿ ಕರಾರು ಪತ್ರಗಳನ್ನು ನಂತರದಲ್ಲಿ ಸೃಷ್ಟಿಸಿದೆಂದು ಕಂಡು ಬರುತ್ತದೆ.

19. ಅಂದಾಜು ಪಟ್ಟಿಗಳಲ್ಲಿ ನಮೂದಿಸಿದಂತೆ ವಿವಿಧ ಹಂತದ ಕಾಮಗಾರಿಗಳನ್ನು ಯಾವ ಯಾವ ದಿನಾಂಕದಂದು ಮಾಡಲಾಯಿತು ಎಂದು ಅಳತೆ ಪುಸ್ತಕದಲ್ಲಿ ಸ್ಪಷ್ಟವಾಗಿ ನಮೂದಿಸಿರುವುದಿಲ್ಲ. ಅಳತೆ ಪುಸ್ತಕಗಳನ್ನು ಒಂದೇ ದಿನ ಬರೆದಿರುವುದು ಕಂಡು ಬರುತ್ತದೆ. ಅಳತೆ ಪುಸ್ತಕಗಳನ್ನು ಎದುರುದಾರರು ಬರೆದಿದ್ದು ಕಂಡು ಬರುವುದಿಲ್ಲ. 2ನೇ ಎದುರುದಾರರು ಕಾಮಗಾರಿಗಳನ್ನು ಪರಿಶೀಲನೆ ಮಾಡಿ ಚೆಕ್ ಮೆಷರ್‌ಮೆಂಟ್ ಮಾಡಿರುವುದಿಲ್ಲ. ಗುತ್ತಿಗೆದಾರರು ಕಟ್ಟಡ, ಕಾಂಪೌಂಡ್ ಗೋಡೆ ಹಾಗೂ ಶೌಚಾಲಯ ಕಟ್ಟಲು ಸಾಮಗ್ರಿಗಳಾದ ಕಲ್ಲು, ಇಟ್ಟಿಗೆ, ಸಿಮೆಂಟ್ ಮತ್ತು ಇತರೆ ವಸ್ತುಗಳನ್ನು ಯಾರಿಂದ ಖರೀದಿಸಿದ್ದರು, ಯಾವ ಗುಣಮಟ್ಟದ ಸಾಮಗ್ರಿಗಳನ್ನು ಖರೀದಿಸಿದ್ದರು ಮತ್ತು ಎಷ್ಟು ಸಾಮಗ್ರಿಗಳನ್ನು ಖರೀದಿಸಿದ್ದರು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಎದುರುದಾರರು ಅಂದಾಜು ಪಟ್ಟಿಯಲ್ಲಿ ಸೂಚಿಸಿದ್ದ ಗುಣಮಟ್ಟದ ಸಾಮಗ್ರಿಗಳಿಂದ ಅಥವಾ ಪ್ರಮಾಣದಂತೆ ಕಟ್ಟಡ ಕಟ್ಟಲಾಯಿತು ಎಂದು ಸಾಬೀತು ಪಡಿಸಲು ವಿಫಲಾರಾಗಿರುತ್ತಾರೆ.

20. ತನಿಖಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದಾಗ ಅಂದಾಜು ಪಟ್ಟಿಯಲ್ಲಿ ನಮೂದಿಸಿದಂತೆ ಪಂಚಾಯಿತಿ ಮೊದಲನೆ ಅಂತಸ್ತಿನ ಕಟ್ಟಡವನ್ನು ಹಾಗೂ ಶೌಚಾಲಯವನ್ನು ಕಟ್ಟಿದ್ದು ಇರುತ್ತದೆ ಎಂದು ತಿಳಿಸಿರುತ್ತಾರೆ. ಅದೇ ರೀತಿ ಕಾಂಪೌಂಡ್ ಗೋಡೆಯನ್ನು ಸಹ ಕಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಆದರೆ ದಾಖಲೆಗಳನ್ನು ಪರಿಶೀಲಿಸಿದಾಗ ಕಾಂಪೌಂಡ್ ಗೋಡೆಯ ಕಾಮಗಾರಿಯಲ್ಲಿ 1 ರಿಂದ 3ನೇ ಎದುರುದಾರರು ಒಟ್ಟು ರೂ. 1,59,268/- ಹಣವನ್ನು ದುರ್ಬಳಕೆ ಮಾಡಿಕೊಂಡು ಸರ್ಕಾರಕ್ಕೆ ನಷ್ಟ ಉಂಟು ಮಾಡಿ, ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

21. 22. ಆದ್ದರಿಂದ, 1 ರಿಂದ 3ನೇ ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ರಿಂದ (iii)ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು

ಔ

ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 1 ರಿಂದ 3ನೇ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಎದುರುದಾರರು ಈಗಾಗಲೇ ನಿವೃತ್ತರಾಗಿದ್ದ ಪಕ್ಷದಲ್ಲಿ, ಕೆ.ಸಿ.ಎಸ್.ಆರ್.ನಿಯಮ 214(2)(ಬಿ) ಅಡಿಯಲ್ಲಿ ಅನುಮತಿ ನೀಡಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಉಪಲೋಕಾಯುಕ್ತರಿಗೆ ವಹಿಸಬೇಕೆಂದೂ ಕೋರಲಾಗಿತ್ತು.

22.ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ ಆ.ಸ.ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆಯಿಂದ ವರ್ತಿಸಿ, ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಆ.ಸ.ನೌಕರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎರ ಅಡಿಯಲ್ಲಿ ಆ.ಸ.ನೌ.ರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಸದರಿ ಶಿಫಾರಸಿನ ಮೇರೆಗೆ ಸರ್ಕಾರವು ಆ.ಸ.ನೌ.ರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತ ರವರಿಗೆ ವಹಿಸಿ ಆದೇಶ ಮಾಡಿದೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ–1 ರವರು ದಿನಾಂಕ: 09/10/2019; ಆ.ಸ.ನೌ–2 ರವರು ದಿನಾಂಕ: 17/08/2019 ಮತ್ತು ಆ.ಸ.ನೌ–3 ರವರು 24/06/2019 ರಂದು

ಹಾಜರಾಗಿದ್ದು, ಆ.ಸ.ನೌ.ರವರುಗಳ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್ (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರುಗಳಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌ-1 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ದಿನಾಂಕ: 29/05/2008 ರಂದು ಪಂಚಾಯಿತಿಯಲ್ಲಿ ಸಾಮಾನ್ಯ ಸಭೆಯಲ್ಲಿ ಕಟ್ಟಡದ ಅನುಮೋದಿತ ಕ್ರಿಯಾ ಯೋಜನೆಯನ್ನು ಅಂದಿನ ಪಂಚಾಯತಿ ಅಧ್ಯಕ್ಷರಾದ ಮಂಜುಳಾ ಇವರು ನಿರ್ಣಯ ತೆಗೆದುಕೊಂಡಿದ್ದು, ಅದರಂತೆ ರೂ.13,60,000/- ಕ್ರಿಯಾ ಯೋಜನೆಯನ್ನು ತಯಾರಿಸಿರುತ್ತಾರೆ. ಸದರಿ ಕಟ್ಟಡವನ್ನು ಕಟ್ಟಲು ಮೊದಲು ಗ್ರಾಮ ಪಂಚಾಯತಿಯಿಂದ 2008-09ನೇ ಸಾಲಿನಲ್ಲಿ ಸಂಗ್ರಹಣೆಗೊಂಡ ತೆರಿಗೆ ಹಣದಲ್ಲಿ ಹಾಗೂ ಸರ್ಕಾರದಿಂದ ಬಂದ 12ನೇ ಹಣಕಾಸಿನ ಯೋಜನೆ ಅಡಿಯ ಅನುದಾನದಲ್ಲಿ ಕೈಗೊಳ್ಳು ನಿರ್ಧರಿಸಲಾಗಿರುತ್ತದೆ. ಸದರಿ ಸಭೆಯ ನಡುವಳಿಗಳನ್ನು ಮಾತ್ರ ಮಾಡುವುದು ಹೊರತುಪಡಿಸಿ ತಮಗೆ ಯಾವುದೇ ರೀತಿಯ ಅಧಿಕಾರ ಇರಲಿಲ್ಲ ಅಂತಾ ಹೇಳಿರುತ್ತಾರೆ. ಕ್ರಿಯಾ ಯೋಜನೆಯನ್ನು ತಯಾರಿಸಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ರವರಿಗೆ ಆಡಳಿತಾತ್ಮಕ ಮಂಜೂರಾತಿಗೆ ಕಳುಹಿಸಿ ಕೊಟ್ಟಿದ್ದು, ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ, ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿ.ಆರ್.ಇ.ಡಿ, ದೇವನಹಳ್ಳಿ ಇವರಿಗೆ ಕಳುಹಿಸಿ ಕೊಡಲಾಗಿತ್ತು. ಆದ್ದರಿಂದ ಇವರಿಗೆ ಕಟ್ಟಡ ಕಟ್ಟಲು ಹಾಗೂ ಟೆಂಡರ್ ಕರೆಯಲು ಯಾವುದೇ ಅಧಿಕಾರವಿರಲಿಲ್ಲ ಅದನ್ನು ಇಂಜಿನಿಯರ್ ವಿಭಾಗದವರಿಗೆ ಅಧಿಕಾರವಿತ್ತು ಎಂದು ಹೇಳಿರುತ್ತಾರೆ. ಅದರಂತೆ ಗುತ್ತಿಗೆದಾರರನ್ನು ನೇಮಿಸುವ ಕೆಲಸ ಸಹ ಇಂಜಿನಿಯರಿಂಗ್ ವಿಭಾಗದವರಿಗೆ ಇತ್ತು ಎಂದು ಹೇಳಿರುತ್ತಾರೆ.

7. ಮುಂದುವರೆದು ಮೊದಲನೆ ಅಂತಸ್ತಿನ ಕಾಮಗಾರಿಯಲ್ಲಿ (1) ಹಾಲ್‌ಗಾಗಿ (2) ರೂಂಗಾಗಿ (3) ಕಂಪ್ಯೂಟರ್ ರೂಂಗಾಗಿ ಮೂರು ವಿಭಜನೆ ಮಾಡಿ ತಲಾ ಕಾಮಗಾರಿಗೆ ರೂ.4 ಲಕ್ಷವೆಂದು ತೋರಿಸಿರುತ್ತಾರೆ ಹಾಗೂ ಕಾಮಗಾರಿಯ ಕ್ರಿಯಾ ಯೋಜನೆಯ ಅನುಮೋದನೆಯನ್ನು ಪಡೆಯುವಾಗ 3 ಭಾಗಗಳಾಗಿ ಮಾಡಿರುವುದಿಲ್ಲ. ಎದುರುದಾರರು ಒಂದೇ ಕಾಮಗಾರಿಯನ್ನು ಮೂರು ವಿಭಾಗ ಮಾಡಿ ಕೆ.ಟಿ.ಪಿ.ಪಿ ಕಾಯ್ದೆಯನ್ನು ಉಲ್ಲಂಘನೆ ಮಾಡಿರುತ್ತಾರೆಂದು ಮಾಡಿದ ಆಪಾದನೆಯಲ್ಲಿ ತನ್ನದೇನು ಪಾತ್ರ ಇರುವುದಿಲ್ಲ. ಇವರು ಕೇವಲ ಸಾಮಾನ್ಯ ಸಭೆಯಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಿ ಕಾರ್ಯಪಾಲಕ ಅಧಿಕಾರಿಗಳಿಗೆ ಅನುಮೋದನೆಗೆ ಕಳುಹಿಸಿ ಕೊಟ್ಟಿರುತ್ತೇನೆ ಎಂದು ಹೇಳಿರುತ್ತಾರೆ. ಅಳತೆ ಪುಸ್ತಕದ ಆಧಾರದ ಮೇಲೆ ಕಾಮಗಾರಿ ಪೂರ್ಣಗೊಂಡ ಬಗ್ಗೆ ಆ.ಸ.ನೌ–3 ರವರು ಬಿಲ್ಲಿನ ಜೊತೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಅನುಮೋದನೆಗೆ ಸಲ್ಲಿಸಿದ್ದು, ಸಹಾಯಕ ಕಾರ್ಯಪಾಲಕ ಅಭಿಯಂತರರು ಅಳತೆ ಪುಸ್ತಕವನ್ನು ಹಾಗೂ ಬಿಲ್ಲುಗಳನ್ನು ಪರಿಶೀಲಿಸಿ, ಅನುಮೋದಿಸಿ ಗುತ್ತಿಗೆದಾರರಿಗೆ ಚೆಕ್ ನೀಡಲು ಕಳುಹಿಸಿದ್ದು, ಅದನ್ನು ತಾನು ಹಾಗೂ ಅಧ್ಯಕ್ಷರು ಸಹಿ ಮಾಡಿ ಚೆಕ್‌ನ್ನು ಮಾತ್ರ ನೀಡಿರುತ್ತೇನೆ ಎಂದು ಹೇಳಿರುತ್ತಾರೆ.

8. ಮುಂದುವರೆದು ಕಾಂಪೌಡ್ ಗೋಡೆ ಕಟ್ಟಲು ರೂ.1 ಲಕ್ಷ ಮಂಜೂರಾಗಿದ್ದು, ಕಾಂಪೌಡ್ ಗೋಡೆಯನ್ನು ಕಟ್ಟಿದ ನಂತರ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಲ್ಲುಗಳನ್ನು ಪಾಸು ಮಾಡಿ ಹಣವನ್ನು ಸಂದಾಯ ಮಾಡಲು ಹೇಳಿದ್ದು ಆ ಪ್ರಕಾರ ತಾನು ಹಾಗೂ ಅಧ್ಯಕ್ಷರು ಚೆಕ್ ಮೂಲಕ ಗುತ್ತಿಗೆದಾರರಿಗೆ ಹಣವನ್ನು ಸಂದಾಯ ಮಾಡಿರುತ್ತೇನೆ ಅಂತಾ ಹೇಳಿರುತ್ತಾರೆ. ಅದೇ ಕಾಂಪೌಡ್ ಗೋಡೆಗೆ ಎರಡನೇ ಸಲ ರೂ.1,59,226.80 ಗಳು ನೀಡಿರುವುದಿಲ್ಲ ಬದಲಾಗಿ ಗ್ರಾಮ ಪಂಚಾಯತಿಯ ಕಟ್ಟಡ ಕಾಮಗಾರಿಯ ಎರಡನೇ ಹಂತದ ಹಣ ಡಿ.ಸಿ ಬಿಲ್ ನಂ.69–09/10 ದಿನಾಂಕ: 12/03/2010 ರಂದು ಮಾಡಿದ್ದು, ಅದು ಕಾಂಪೌಡ್ ಗೋಡೆಗೆ ಸಂಬಂಧಿಸಿದ ಬಗ್ಗೆ ಇರುವುದಿಲ್ಲ ಅಂತಾ ಹೇಳಿರುತ್ತಾರೆ. ಆದ್ದರಿಂದ, ತಾನು ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂದು ಹೇಳಿರುತ್ತಾರೆ.

9. ಆ.ಸ.ನೌ–2 ರವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

10. ಆ.ಸ.ನೌ–3 ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯಲ್ಲಿ ತಾನು 2008–09ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿ, ಇಂಜಿನಿಯರಿಂಗ್ ಉಪವಿಭಾಗ, ದೇವನಹಳ್ಳಿಯಲ್ಲಿ ಕಿರಿಯ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿದ್ದು, ಕಾಮಗಾರಿಯ ಕ್ರಿಯಾ ಯೋಜನೆಯ ಅನ್ವಯ ಟೆಂಡರ್ ಕರೆಯುವ ಅಧಿಕಾರ ತನಗೆ ಹೊಂದಿರುವುದಿಲ್ಲ ಅಲ್ಲದೇ ಪ್ರಸ್ತುತ ಪ್ರಕರಣದಲ್ಲಿ ಕಾಮಗಾರಿಯ ಗುತ್ತಿಗೆಯನ್ನು ತಾನು ನೀಡಿರುವುದಿಲ್ಲ ಎಂದು ಹೇಳಿರುತ್ತಾರೆ. ಮುಂದುವರೆದು ಕ್ರಿಯಾ ಯೋಜನೆಯನ್ನು ಈ ಪ್ರಕರಣದ ಆ.ಸ.ನೌ–1 ಇವರು ಸಿದ್ದಪಡಿಸಿದ್ದು, ಅಂದಿನ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ. ಎಂ ರವೀಂದ್ರ ರೆಡ್ಡಿ ಇವರು ಅನುಮೋದಿಸಿರುತ್ತಾರೆ. ಕ್ರಿಯಾ ಯೋಜನೆಯಲ್ಲಿ ಬದಲಾವಣೆಯನ್ನು ಮಾಡಿಕೊಳ್ಳಲು ತನಗೆ ಅಧಿಕಾರವಿಲ್ಲ ಎಂದು ಹೇಳಿರುತ್ತಾರೆ. ಕ್ರಿಯಾ ಯೋಜನೆಯ ಅನ್ವಯ ಆ.ಸ.ನೌ–2 ಸಹಾಯಕ ಕಾರ್ಯಪಾಲಕ ಅಭಿಯಂತರರು ಕ್ರಮ ವಹಿಸಿರುತ್ತಾರೆ ಹಾಗೂ ಕಾಮಗಾರಿಯನ್ನು ತುಂಡು ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲಾಗಿದೆ ಅಂತಾ ಹೇಳಿರುತ್ತಾರೆ.

11. ಮುಂದುವರೆದು ಕಾಂಪೌಡ್ ಗೋಡೆಗಾಗಿ ರೂ.1 ಲಕ್ಷ ಮಂಜೂರಾಗಿದ್ದು, ರೂ.89,899/– ವೆಚ್ಚವಾಗಿರುತ್ತದೆ. ಕಾಮಗಾರಿಯನ್ನು ಗುತ್ತಿಗೆದಾರರಾದ ಶ್ರೀ. ಎಂ ಗೋಪಾಲಗೌಡ ಇವರ ಮುಖಾಂತರ ನಿರ್ವಹಿಸಿದ್ದು, ತಾನು ಎಂ.ಬಿ ಪುಸ್ತಕವನ್ನು ಬರೆದಿರುವುದಿಲ್ಲ ಅದನ್ನು ಅಂದಿನ ಕಿರಿಯ ಅಭಿಯಂತರರಾದ ಶ್ರೀಮತಿ. ನಾಝೀರಾರವರು ಕಾಮಗಾರಿ ನಿರ್ವಹಿಸಿ ಅಳತೆ ಪುಸ್ತಕ ಬರೆದಿರುತ್ತಾರೆ. ಆ.ಸ.ನೌ–2 ಇವರು ಅಳತೆಯನ್ನು ಪರಿಶೀಲಿಸಿ ಅಳತೆ ಪುಸ್ತಕದಲ್ಲಿ ಸಹಿ ಮಾಡಿರುತ್ತಾರೆ. ಆದ್ದರಿಂದ ಕಾಂಪೌಡ್ ಗೋಡೆ ನಿರ್ಮಾಣದಲ್ಲಿ 2 ಬಾರಿ ಹಣ ಪಾವತಿಯಾಗಿರುವುದಿಲ್ಲವೆಂದು ಹೇಳಿರುತ್ತಾರೆ.

12. ಮುಂದುವರೆದು ಕಾಂಪೌಡ್ ಗೋಡೆಗೆ ರೂ.2.60 ಲಕ್ಷ ಕ್ರಿಯಾ ಯೋಜನೆ ಅನುಮೋದನೆಗೊಂಡಿದ್ದು, ಕ್ರಿಯಾ ಯೋಜನೆಯಂತೆ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ ಸಹಿ

ಮಾಡಿರುತ್ತೇನೆ ಅಂತಾ ಹೇಳಿರುತ್ತಾರೆ. ಸದರಿ ಅಂದಾಜುಪಟ್ಟಿಗೆ ಆ.ಸ.ನೌ–1 ಮತ್ತು 2 ಸಹಿ ಮಾಡಿರುತ್ತಾರೆ. ಕಾಮಗಾರಿಗೆ ಸಂಬಂಧಿಸಿದ ಕರಾರು ಪತ್ರವನ್ನು ಆ.ಸ.ನೌ–2 ಹಾಗೂ ಗುತ್ತಿಗೆದಾರರು ಸಹಿ ಮಾಡಿರುತ್ತಾರೆ. ಕಾಮಗಾರಿಯನ್ನು ನಿರ್ವಹಿಸಿದ ಬಗ್ಗೆ ಅಳತೆ ಪುಸ್ತಕವನ್ನು ಇವರು ನಮೂದು ಮಾಡಿದ್ದು, ಅಳತೆ ಪುಸ್ತಕದ 21ನೇ ಪುಟದಲ್ಲಿ ರೂ.2.60 ಲಕ್ಷಕ್ಕೆ ಬಿಲ್ಲಿಗಾಗಿ ಶಿಫಾರಸ್ಸು ಮಾಡಿರುವುದಿಲ್ಲ. ರೂ.1 ಲಕ್ಷವನ್ನು ಈ ಹಿಂದೆ ಕಾಮಗಾರಿ ನಿರ್ವಹಿಸಿರುವುದರಿಂದ ಕಳೆದ ರೂ.1,59,267.95 ಎಂದು ನಮೂದಿಸಿರುತ್ತೇನೆ. ಆದ್ದರಿಂದ ಆರೋಪದಲ್ಲಿ ಇರುವಂತೆ ಕಾಂಪೌಡ್ ಗೋಡೆ ನಿರ್ಮಾಣಕ್ಕೆ 2 ಬಾರಿ ಪಾವತಿಯಾಗಿರುವುದಿಲ್ಲ. ಆದ್ದರಿಂದ, ತಾನು ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂದು ಹೇಳಿರುತ್ತಾರೆ.

13. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.1 ರಿಂದ 8 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಶ್ರೀಮತಿ. ನಾಗರತ್ನಮ್ಮ ಇವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.9 ರಿಂದ 13 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ ಮತ್ತು ಇವರ ಪಾಟಿಸವಾಲಿನಲ್ಲಿ ನಿ.ಡಿ.1ನ್ನು ಗುರುತಿಸಿಕೊಂಡಿರುತ್ತಾರೆ. ಆ.ಸ.ನೌ–3 ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿರುತ್ತಾರೆ. ಆ.ಸ.ನೌ–1 ರವರು ತಮ್ಮನ್ನು ಡಿ.ಡಬ್ಲ್ಯೂ.2 ಎಂದು ಸಾಕ್ಷಿ ನುಡಿದಿರುತ್ತಾರೆ. ಆ.ಸ.ನೌ–2 ರವರು ತಮ್ಮನ್ನು ಡಿ.ಡಬ್ಲ್ಯೂ.3 ಎಂದು ಸಾಕ್ಷಿ ನುಡಿದಿದ್ದು, ನಿ.ಡಿ.2ನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

14. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರುಗಳು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

15. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರುಗಳ ಮೇಲೆ

ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

16. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

17. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಆ.ಸ.ನೌ–2 ಮತ್ತು 3 ಇವರ ವಿರುದ್ಧ ಭಾಗಶಃ ಸಕಾರಾತ್ಮಕವಾಗಿ.**
**ಆ.ಸ.ನೌ–1 ಇವರ ವಿರುದ್ಧ ನಕಾರಾತ್ಮಕವಾಗಿ**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

18. ಶಿಸ್ತು ಪ್ರಾಧಿಕಾರ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿ.ಪಿ.1 ರಿಂದ 8 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆನ್‌ಲೈನ್ ಮುಖಾಂತರ ಕೆಲವೊಂದು ದಾಖಲಾತಿಗಳನ್ನು ಪಡೆದುಕೊಂಡಾಗ ಗ್ರಾಮಪಂಚಾಯಿತಿ ಕಟ್ಟಡಕ್ಕೆ ಮಂಜೂರಾದ ಹಣ ಖರ್ಚಾಗದೇ ಹಾಗೂ ಯಾವುದೇ ಟೆಂಡರ್ ಕರೆಯದೇ, ತುಂಡು ಗುತ್ತಿಗೆ ಆಧಾರದ ಮೇಲೆ ಹಣ ಖರ್ಚು ಮಾಡುತ್ತಿದ್ದರಿಂದ ಸಂಶಯ ಬಂದು ಆ.ಸ.ನೌ–1 ರವರ ಮೇಲೆ ದೂರನ್ನು ಸಲ್ಲಿಸಿರುತ್ತೇನೆ ಅಂತಾ ನುಡಿದಿರುತ್ತಾರೆ. ನಿ.ಪಿ.1 ಈ ಸಂಸ್ಥೆಗೆ ನೀಡಿದ ದೂರು; ನಿ.ಪಿ.2 ಫಾರಂ ನಂ.1 ಹಾಗೂ ನಿ.ಪಿ.3 ಫಾರಂ ನಂ.2; ನಿ.ಪಿ.4 ಕ್ರಿಯಾ ಯೋಜನೆ ಪುಟ ನಂ.6 ರಿಂದ 43; ನಿ.ಪಿ.5 ಶೌಚಾಲಯದ ನಿರ್ಮಾಣದ ಬಗ್ಗೆ ಪುಟ ನಂ.44 ರಿಂದ 50; ನಿ.ಪಿ.6 ಕಾಂಪೌಂಡ್ ಕಾಮಗಾರಿ ಪುಟ ನಂ.51 ರಿಂದ 56; ನಿ.ಪಿ.7 ತುಂಡು ಗುತ್ತಿಗೆ ಕರಾರು ಪಾವತಿ ಪುಟ ನಂ.57

ರಿಂದ 62; ನಿ.ಪಿ.8 ಶೌಚಾಲಯ ನಿರ್ಮಾಣದ ಬಗ್ಗೆ ಪುಟ ನಂ.63 ರಿಂದ 68 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

19. ಈ ವಿಚಾರಣೆಯಲ್ಲಿ ತಾಂತ್ರಿಕ ವಿಭಾಗ ಬೆಂಗಳೂರು ಇವರನ್ನು ಆಪಾದನೆಗಳ ಬಗ್ಗೆ ತನಿಖೆ ನಡೆಸಿ ವರದಿಯನ್ನು ಸಲ್ಲಿಸಲು ಸೂಚಿಸಿದ್ದು, ಆ ಪ್ರಕಾರ ಅವರು ವರದಿಯನ್ನು ಸಲ್ಲಿಸಿರುತ್ತಾರೆ. ಶಿಸ್ತು ಪ್ರಾಧಿಕಾರವು ತನಿಖಾಧಿಕಾರಿಗಳಾದ ಶ್ರೀಮತಿ. ನಾಗರತ್ನಮ್ಮ ಇವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 13/04/2017 ರಂದು ಯಲಿಯೂರು ಗ್ರಾಮ ಪಂಚಾಯಿತಿ ತಾಲ್ಲೂಕು ದೇವನಹಳ್ಳಿ ಕಛೇರಿಗೆ ಭೇಟಿ ನೀಡಿ ತನಿಖೆಯನ್ನು ಕೈಗೊಂಡು ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ ಮತ್ತು ಇವರು ನಿ.ಪಿ.9 ರಿಂದ 13 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

20.ಮುಂದುವರೆದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಗ್ರಾಮ ಪಂಚಾಯಿತಿಗೆ ಭೇಟಿ ನೀಡಿದಾಗ, ಗ್ರಾಮ ಪಂಚಾಯಿತಿಯ ಕಛೇರಿಯ ನೆಲಮಹಡಿ ಕಟ್ಟಡವು ಹಳೆಯದಾಗಿದ್ದು, ಮೊದಲನೆಯ ಅಂತಸ್ತಿನ ಕಟ್ಟಡದ ಕಾರ್ಯಾದೇಶವನ್ನು ಪಡೆದುಕೊಂಡಿದ್ದು, ಅದರ ಒಟ್ಟು ಮೊತ್ತ ರೂ.13,60,000/- ಗಳಾಗಿದ್ದು, ಅದನ್ನು 2008 ರಲ್ಲಿ ಪ್ರಾರಂಭಿಸಿ 2010 ರಲ್ಲಿ ಪೂರ್ಣಗೊಳಿಸಿ ಈ ಬಗ್ಗೆ ನಿ.ಪಿ.10 ರಂತೆ ಸ್ಥಳ ಮಹಜರ್ ಮಾಡಿರುತ್ತೇನೆ ಅಂತಾ ನುಡಿದಿರುತ್ತಾರೆ. ಇವರ ಅಭಿಪ್ರಾಯದ ಪ್ರಕಾರ ಸದರಿ ಕಟ್ಟಡ ಒಂದೇ ಕಾಮಗಾರಿಯಾಗಿದ್ದು, ಟೆಂಡರ್ ಕರೆದು ಒಬ್ಬ ಗುತ್ತಿಗೆದಾರರಿಗೆ ನೀಡಬೇಕಾಗಿತ್ತು ಆದರೆ ಸದರಿ ಕಟ್ಟಡವನ್ನು 5 ಹಂತದಲ್ಲಿ ಮಾಡಿದ್ದು, 3 ಹಂತದಲ್ಲಿ ಕಟ್ಟಡ ಮುಗಿದಿದ್ದು, 4ನೇಯದು ಸುತ್ತು ಕಾಂಪೌಂಡ್, 5ನೇಯದು ಶೌಚಾಲಯ ಇರುತ್ತದೆ ಅಂತಾ ನುಡಿದಿರುತ್ತಾರೆ.

21. ಮುಂದುವರೆದು ಅಳತೆ ಪುಸ್ತಕಗಳನ್ನು ಪರಿಶೀಲನೆ ಮಾಡಿದಾಗ ಅದನ್ನು ಚೆಕ್ ಮೆಷರ್‌ಮೆಂಟ್‌ನ್ನು ಬರೆದ ನಂತರ ಎ.ಇ.ಇ ರವರು ಪರಿಶೀಲನೆ ನಂತರ ಹಣ ಬಿಡುಗಡೆ

ಮಾಡಬೇಕಾಗುತ್ತದೆ. ಆದರೆ ಕೆಲವೊಂದು ಅಳತೆ ಪುಸ್ತಕಗಳಲ್ಲಿ ಎ.ಇ.ಇ ರವರ ಸಹಿಯನ್ನು ಪಡೆಯದೇ ಹಣ ಬಿಡುಗಡೆ ಮಾಡಿರುವುದು ಕಂಡುಬಂದಿದ್ದರಿಂದ ಅಳತೆ ಪುಸ್ತಕಗಳ ಬಗ್ಗೆ ಇವರ ಮುಖ್ಯ ಅಭಿಯಂತರರ ಅಭಿಪ್ರಾಯವನ್ನು ಕೋರಿದಾಗ, ಅವರು ದಿನಾಂಕ: 05/02/2011 ರಂದು ನಿ.ಪಿ.9 ರಂತೆ ವರದಿಯನ್ನು ಸಲ್ಲಿಸಿದ್ದು, ನಿ.ಪಿ.9ರ ಪ್ರಕಾರ ಎ.ಇ.ಇ ರವರ ಸಹಿ ಇಲ್ಲದೇ ರೂ.86,641/–; ರೂ.2,69,693 ಹಾಗೂ ರೂ.3,00,000/– ಗಳನ್ನು ನೀಡಿದ್ದು ಕಂಡುಬರುತ್ತದೆ ಅಂತಾ ನುಡಿದಿರುತ್ತಾರೆ. ಮುಂದುವರೆದು ಗ್ರಾಮ ಪಂಚಾಯಿತಿ ಕಟ್ಟಡದ ಮೊದಲನೇ ಅಂತಸ್ತಿನ ಕಾಮಗಾರಿ ಅಂದಾಜು ಮೊತ್ತ ರೂ. 12 ಲಕ್ಷಗಳಾಗಿದ್ದು, ಒಂದೇ ಕಟ್ಟಡವಾಗಿದ್ದು, ಅದನ್ನು ಟೆಂಡರ್ ಪ್ರಕಟಿಸದೇ, ತುಂಡು ಗುತ್ತಿಗೆ ಕಾಮಗಾರಿಗಳಿಗಾಗಿ ತಲಾ ರೂ.4 ಲಕ್ಷಗಳೆಂದು 3 ಕಾಮಗಾರಿಗಳನ್ನು ವಿಭಜಿಸಿ, ಟೆಂಡರ್ ತಪ್ಪಿಸಲು ಮತ್ತು ಕೆ.ಟಿ.ಪಿ.ಪಿ ಕಾಯ್ದೆ ಅನ್ವಯಿಸದಂತೆ ಉದ್ದೇಶಪೂರ್ವಕವಾಗಿ ಕಾಮಗಾರಿಯನ್ನು ಸರ್ಕಾರದ ನಿಯಮಾವಳಿಗೆ ವಿರುದ್ಧವಾಗಿ ಕ್ರಮವಹಿಸಿರುತ್ತಾರೆ ಅಂತಾ ನುಡಿದಿರುತ್ತಾರೆ.

22.ಮುಂದುವರೆದು 2008–09ನೇ ಸಾಲಿನಲ್ಲಿ ಕಾಂಪೌಂಡ್ ಗೋಡೆ ನಿರ್ಮಾಣದಲ್ಲಿ 2 ಬಿಲ್ಲುಗಳು ಪಾಸಾಗಿದ್ದು, ಅವ್ಯವಹಾರ ಮೊತ್ತ ರೂ.1.59 ಲಕ್ಷ ಗಳಿಗೆ ಬಿಲ್ಲು ಪಾವತಿಸಿಕೊಂಡು ಬಂದಿದ್ದು, ಈ ಬಗ್ಗೆ ನಿ.ಪಿ.11 ರಂತೆ ವರದಿಯನ್ನು ಸಲ್ಲಿಸಿದ್ದು, ಸ್ಥಳಕ್ಕೆ ಭೇಟಿ ನೀಡಿದ ಬಗ್ಗೆ ನಿ.ಪಿ.12 ರಂತೆ ಛಾಯಾಚಿತ್ರಗಳನ್ನು ತೆಗೆದಿದ್ದು, ನಿ.ಪಿ.13 ರಂತೆ ಸಿ.ಡಿಯನ್ನು ಮಾಡಿಕೊಂಡಿರುತ್ತೇನೆ ಅಂತಾ ನುಡಿದಿರುತ್ತಾರೆ.

23.ಆ.ಸ.ನೌ–3 ರವರು ಡಿ.ಡಬ್ಲ್ಯೂ.1 ಎಂದು, ಆ.ಸ.ನೌ–1 ಇವರು ಡಿ.ಡಬ್ಲ್ಯೂ.2 ಎಂದು ಸಾಕ್ಷಿ ನುಡಿದ್ದು, ಇವರು ತಮ್ಮ ರಕ್ಷಣಾ ಹೇಳಿಕೆಯಲ್ಲಿ ಹೇಳಿದ ವಿಷಯವನ್ನೇ ಹೇಳಿರುತ್ತಾರೆ. ಆ.ಸ.ನೌ–2 ಇವರು ಡಿ.ಡಬ್ಲ್ಯೂ.3 ಎಂದು ಸಾಕ್ಷಿ ನುಡಿದಿದ್ದು, ಇವರ ಸಾಕ್ಷಿಯಲ್ಲಿ 2008–09ನೇ ಸಾಲಿನ ಗ್ರಾಮ ಪಂಚಾಯಿತಿಯ ಮೊದಲನೇ ಅಂತಸ್ತಿನ ಕಟ್ಟಡದ ಕ್ರಿಯಾ ಯೋಜನೆಗಳ ಬಗ್ಗೆ 4 ಪುಟಗಳ notarized ಪ್ರತಿಯನ್ನು ನಿ.ಡಿ.2 ಎಂದು ಗುರುತಿಸಿಕೊಂಡಿರುತ್ತಾರೆ.

&

24.ಪಿ.ಡಬ್ಲ್ಯೂ.1 ಇವರಿಗೆ ಆ.ಸ.ನೌ ಪರ ವಕೀಲರು ಮಾಡಿದ ಪಾಟಿಸವಾಲಿನಲ್ಲಿ ಪ್ಯಾರಾ ನಂ.7 ರಲ್ಲಿ "ಪಂಚಾಯಿತಿಯಲ್ಲಿ ಯಾವುದಾದರೂ ಕಾಮಗಾರಿಗಳನ್ನು ಮಾಡಬೇಕಾದಾಗ ಅದರ ಬಗ್ಗೆ ಒಂದು ಕ್ರಿಯಾ ಯೋಜನೆಯನ್ನು ಮಾಡುತ್ತಾರೆ ಎಂದರೆ ಸರಿ. ಸದರಿ ಕ್ರಿಯಾ ಯೋಜನೆಯನ್ನು ಪಿ.ಡಿ.ಓ ಮತ್ತು ಅವರ ಸಿಬ್ಬಂದಿಯವರು ತಯಾರಿಸುತ್ತಾರೆ ಎಂದರೆ ಸರಿ. ಯಲಿಯೂರು ಗ್ರಾಮ ಪಂಚಾಯಿತಿಯ ಮೊದಲನೆ ಮಹಡಿಯನ್ನು ಕಟ್ಟುವ ಸಂಬಂಧ ಆ.ಸ.ನೌ–1 ಮತ್ತು ಅವರ ಸಿಬ್ಬಂದಿಯವರು ಕೂಡಿ ತಯಾರಿಸುತ್ತಾರೆ ಎಂದರೆ ಸರಿ. ಸದರಿ ಮೊದಲನೆ ಮಹಡಿಯನ್ನು ಕಟ್ಟಲು ರೂ.13.60 ಲಕ್ಷ ವೆಚ್ಚವಾಗುತ್ತಿದ್ದು, ಸದರಿ ಹಣವನ್ನು ಕ್ರೂಡಿಕರಿಸಲು ತೆರಿಗೆ, ಸರ್ಕಾರದ ಅನುದಾನ ಮತ್ತು 12ನೇ ಹಣಕಾಸಿನ ಯೋಜನೆಯಲ್ಲಿ ಬಂದಂತಹ ಹಣವನ್ನು ಪಡೆದುಕೊಂಡು ಕಟ್ಟಡವನ್ನು ಮಾಡಬಹುದೆಂದು ಕ್ರಿಯಾ ಯೋಜನೆಯನ್ನು ತಯಾರಿಸಿ ಸಭೆಯಲ್ಲಿ ಇಟ್ಟಿರುತ್ತಾರೆ ಎಂದರೆ ಸರಿ" ಅಂತಾ ಒಪ್ಪಿಕೊಂಡಿರುತ್ತಾರೆ.

25.ಮುಂದುವರೆದು ಪಿ.ಡಬ್ಲ್ಯೂ.1 ಇವರು ಪ್ಯಾರಾ ನಂ.8ರ ಪಾಟಿಸವಾಲಿನಲ್ಲಿ "ದಿನಾಂಕ: 29/05/2008 ರಲ್ಲಿ ಆಗಿನ ಅಧ್ಯಕ್ಷರಾದ ಮಂಜುಳಾ ರವರ ಅಧ್ಯಕ್ಷತೆಯಲ್ಲಿ ಮತ್ತು ಸದಸ್ಯರ ಅನುಮೋದನೆಯ ಮೇರೆಗೆ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಲು ನಿರ್ಣಯ ಅಂಗೀಕರಿಸಿರುತ್ತಾರೆ ಎಂದರೆ ಸರಿ. ನಂತರ ಪಿ.ಡಿ.ಓ ರವರು ಆದ ನಡವಳಿಕೆಗಳ ಮೇಲೆ ತಮ್ಮ ಪ್ರಸ್ತಾವನೆಯನ್ನು ಆಡಳಿತಾತ್ಮಕ ಮಂಜೂರಿಗಾಗಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸಿಕೊಡುತ್ತಾರೆ ಎಂದರೆ ಸರಿ. ನಂತರ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಅದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುತ್ತಾರೆ ಎಂದರೆ ಸರಿ" ಅಂತಾ ಒಪ್ಪಿಕೊಂಡಿರುತ್ತಾರೆ. ಆ.ಸ.ನೌ–1 ಇವರ ಪ್ರಕಾರ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದ ನಂತರ ಅದನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಅನುಷ್ಠಾನಗೊಳಿಸಲು ಕಳುಹಿಸಿಕೊಟ್ಟಿರುತ್ತೇನೆ. ಸದರಿ ಕಟ್ಟಡಕ್ಕೆ ನಿರ್ಮಾಣ ಮಾಡಲು ಬಿಲ್ಡಿಂಗ್ ಪ್ಲಾನ್, ಅಂದಾಜು ವೆಚ್ಚ, ತಾಂತ್ರಿಕ ಮಂಜೂರಾತಿಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಕೊಡುತ್ತಾರೆ ಅಂತಾ ಹೇಳಿದ್ದು, ಈ ಬಗ್ಗೆ ಪಿ.ಡಬ್ಲ್ಯೂ.1 ಇವರು

ತಮ್ಮ ಪಾಟಿಸವಾಲಿನಲ್ಲಿ ಪ್ಯಾರಾ ನಂ.9 ಮತ್ತು 10 ರಲ್ಲಿ ಒಪ್ಪಿಕೊಂಡಿರುತ್ತಾರೆ. ಅಲ್ಲದೇ ಟೆಂಡರ್ ಕರೆಯುವುದಾಗಲೀ ಅಥವಾ ಅಂಗೀಕರಿಸುವುದಾಗಲೀ ಮತ್ತು ಕಾರ್ಯಾದೇಶವನ್ನು ಮಾಡುವುದಾಗಲೀ ಜಿಲ್ಲಾ ಪಂಚಾಯತ್ ಇವರ ವ್ಯಾಪ್ತಿಯಲ್ಲಿ ಬರುತ್ತದೆ ಎನ್ನುವ ಬಗ್ಗೆ ಪಿ.ಡಬ್ಲ್ಯೂ.1 ಇವರು ತಮ್ಮ ಪಾಟಿಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ನಿ.ಪಿ.4ನ್ನು ಪರಿಶೀಲಿಸಿದಾಗ ಮೊದಲನೇ ಅಂತಸ್ತಿನ ಕಾಮಗಾರಿಯ ಬಗ್ಗೆ ತುಂಡು ಗುತ್ತಿಗೆ ಕರಾರು ಪತ್ರ ಆಗಿದ್ದು, ಅದರ ಅಂದಾಜು ವೆಚ್ಚ ರೂ.3.80 ಲಕ್ಷ ಇದ್ದು, ಇದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ದೇವನಹಳ್ಳಿ (ಆ.ಸ.ನೌ–2) ಹಾಗೂ ಗುತ್ತಿಗೆದಾರರ ನಡುವೆ ಆಗಿದ್ದು ಇರುತ್ತದೆ.

26.ಆ.ಸ.ನೌ–2 ಮತ್ತು 3 ಪರ ವಕೀಲರು ತನಿಖಾಧಿಕಾರಿಗಳಿಗೆ (ಪಿ.ಡಬ್ಲ್ಯೂ.2) ಇವರಿಗೆ ಮಾಡಿದ ಪಾಟಿಸವಾಲಿನಲ್ಲಿ ಪ್ಯಾರಾ ನಂ.5 ರಲ್ಲಿ "ಈ ಕಾಮಗಾರಿಗೆ ಸಂಬಂಧಪಟ್ಟಂತೆ ಟೆಂಡರ್ ಕರೆಯುವ ಅಧಿಕಾರಿ, ಟೆಂಡರ್ ಪರಿಶೀಲಿಸುವ ಅಧಿಕಾರಿ ಮತ್ತು ಟೆಂಡರ್ ಅಂಗೀಕರಿಸುವ ಅಧಿಕಾರಿ ಯಾರು ಇದ್ದರು ಎನ್ನುವುದಕ್ಕೆ ಸಾಕ್ಷಿಯು ಈ ವಿಷಯದ ಬಗ್ಗೆ ನಾನು ನನ್ನ ವರದಿಯಲ್ಲಿ ನಮೂದಿಸಿರುವುದಿಲ್ಲ" ಎಂದು ನುಡಿದಿರುತ್ತಾರೆ. ಮುಂದುವರೆದು ಇವರ ಪಾಟಿಸವಾಲು ಪ್ಯಾರಾ ನಂ.6 ರಲ್ಲಿ "ಒಂದೇ ಕಟ್ಟಡ, ಒಂದೇ ಕಾಂಪೌಂಡ್ ವಾಲ್ ಮತ್ತು ಒಂದು ಶೌಚಾಲಯ ಈ ಎಲ್ಲಾ ಕಾಮಗಾರಿಗಳಿಗೆ ಎಷ್ಟು ಜನ ಗುತ್ತಿಗೆದಾರರು ಇದ್ದರು ಎನ್ನುವುದಕ್ಕೆ ಸಾಕ್ಷಿಯು ಈ ವಿಷಯದ ಬಗ್ಗೆ ನಾನು ನನ್ನ ವರದಿಯಲ್ಲಿ ನಮೂದಿಸಿರುವುದಿಲ್ಲ" ಎಂದು ನುಡಿದಿರುತ್ತಾರೆ. ಅದರಂತೆ ಪಿ.ಡಬ್ಲ್ಯೂ.2 ಇವರಿಗೆ ಆ.ಸ.ನೌ–1 ಪರ ವಕೀಲರು ಪಾಟಿಸವಾಲು ಮಾಡಿದಾಗ ಪ್ಯಾರಾ ನಂ.15 ರಲ್ಲಿ "ಈ ವಿಚಾರಣೆಯಲ್ಲಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಸರ್ಕಾರದಿಂದ ಯಾವುದೇ ಅನುದಾನ ಬರದ ಕಾರಣ ಒಂದು ಕಟ್ಟಡ ಮತ್ತು ಕಾಂಪೌಂಡ್ ಕಟ್ಟಡವು ಅಂದಾಜು ರೂ.13.60 ಲಕ್ಷ ಬೇಕಾಬಹುದು ಅಂತಾ ಅಂದಿನ ಅಧ್ಯಕ್ಷರಾದ ಶ್ರೀಮತಿ. ಮಂಜುಳಾ ರವರ ಅಧ್ಯಕ್ಷತೆಯಲ್ಲಿ ಒಂದು ಸಾಮಾನ್ಯ ಸಭೆಯಲ್ಲಿ ದಿನಾಂಕ: 29/05/2008 ರಂದು ನಿರ್ಣಯ ತೆಗೆದುಕೊಂಡಿರುತ್ತಾರೆ ಎಂದರೆ ಸರಿ" ಅಂತಾ ಒಪ್ಪಿಕೊಂಡಿರುತ್ತಾರೆ. ಅದರಂತೆ ಪಾಟಿಸವಾಲು ಪ್ಯಾರಾ ನಂ.16 ರಲ್ಲಿ "ಸಾಮಾನ್ಯ ಸಭೆಯಲ್ಲಿ

<signature>

ತೆಗೆದುಕೊಂಡ ನಿರ್ಣಯದ ಬಗ್ಗೆ ಪಿ.ಡಿ.ಓ ರವರು ಕೇವಲ ಸದಸ್ಯ ಕಾರ್ಯದರ್ಶಿ ಇದ್ದು, ಸದಸ್ಯರು ಮತ್ತು ಅಧ್ಯಕ್ಷರು ಏನು ನಿರ್ಣಯ ತೆಗೆದುಕೊಂಡಿರುತ್ತಾರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ ಎಂದರೆ ಸರಿ" ಅಂತಾ ಒಪ್ಪಿಕೊಂಡಿರುತ್ತಾರೆ. ಮುಂದುವರೆದು ಪ್ಯಾರಾ ನಂ.17 ರಲ್ಲಿ "ಸಭೆಯ ನಿರ್ಣಯದಂತೆ ಕ್ರಿಯಾ ಯೋಜನೆಯನ್ನು ತಯಾರಿಸಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸುವ ಕರ್ತವ್ಯ ಮಾತ್ರ ಆ.ಸ.ನೌ–1 ರವರದ್ದು ಇರುತ್ತದೆ ಎಂದರೆ ಸರಿ. ಸದರಿ ಕ್ರಿಯಾ ಯೋಜನೆಗೆ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದನೆ ಕೊಡುತ್ತಾರೆ ಎಂದರೆ ಸರಿ. ಸದರಿ ಅನುಮೋದನೆ ಬಂದ ನಂತರ ಪಿ.ಡಿ.ಓ ರವರು ಅದನ್ನು ನೇರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಕಳುಹಿಸಿರುತ್ತಾರೆ ಎಂದರೆ ಸರಿ. ಅದಾದ ನಂತರ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇವರು ಕಟ್ಟಡದ ನಕ್ಷೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿ. ನಂತರ ಕಟ್ಟಡ ಕಟ್ಟುವ ಬಗ್ಗೆ ಮುಂದಿನ ಕ್ರಮಕ್ಕಾಗಿ ಟೆಂಡರ್ ಕರೆಯುವುದು, ತುಂಡು ಗುತ್ತಿಗೆಯನ್ನು ಕೊಡುವ ನಿರ್ಣಯವನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದವರೇ ಮಾಡುತ್ತಾರೆ ಎಂದರೆ ಸರಿ. ಒಂದು ವೇಳೆ ಕಟ್ಟಡ ಕಾಮಗಾರಿಯ ಮೊತ್ತ ರೂ.5 ಲಕ್ಷಕ್ಕಿಂತ ಕಡಿಮೆ ಇದ್ದರೆ ತುಂಡು ಗುತ್ತಿಗೆಯನ್ನು ಸಹ ಕೊಡಬಹುದು ಎಂದರೆ ಸರಿ" ಅಂತಾ ಒಪ್ಪಿಕೊಂಡಿರುತ್ತಾರೆ. ಮುಂದುವರೆದು ಪ್ಯಾರಾ ನಂ.18 ರಲ್ಲಿ "ಒಮ್ಮೆ ಸಾಮನ್ಯ ಸಭೆಯಲ್ಲಿ ನಿರ್ಣಯ ತೆಗೆದುಕೊಂಡ ನಂತರ ಗ್ರಾಮ ಪಂಚಾಯಿತಿಯ ಯಾವುದೇ ಹಸ್ತಕ್ಷೇಪ ಇರುವುದಿಲ್ಲ ಎಂದರೆ ಸರಿ. ಅದರಂತೆ ಪಿ.ಡಿ.ಓ ರವರಿಗೆ ಟೆಂಡರ್ ಕರೆಯುವ ಅಧಿಕಾರ ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ಕಟ್ಟಡದ ಗುಣಮಟ್ಟ ಮತ್ತು ಅದರ ಅಳತೆ ತಪಾಸಣೆ ಮಾಡುವುದು ಪಿ.ಡಿ.ಓ ರವರ ಕರ್ತವ್ಯದಲ್ಲಿ ಬರುವುದಿಲ್ಲ ಎಂದರೆ ಸರಿ" ಅಂತಾ ಒಪ್ಪಿಕೊಂಡಿರುತ್ತಾರೆ. ಈ ಮೇಲೆ ಹೇಳಿದ ಸಾಕ್ಷಿಯನ್ನು ಪರಿಗಣಿಸಿದಾಗ ಅಂದಿನ ಅಧ್ಯಕ್ಷರಾದ ಮಂಜುಳಾ ಇವರ ಅಧ್ಯಕ್ಷತೆಯಲ್ಲಿ ಈ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಸಾಮಾನ್ಯ ಸಭೆಯಲ್ಲಿ ಮಂಜೂರಾಗಿದ್ದು, ಅದರಂತೆ ಆ.ಸ.ನೌ–1 ಇವರು ತಮ್ಮ ಮೇಲಾಧಿಕಾರಿಗಳಿಗೆ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದ ಬಗ್ಗೆ ತಿಳಿಸಿದ್ದು ಕಂಡುಬರುತ್ತದೆ. ಅಲ್ಲದೇ, ತನಿಖಾಧಿಕಾರಿಗಳ ಪ್ರಕಾರ ಆ.ಸ.ನೌ–1 ಇವರಿಗೆ ಟೆಂಡರ್ ಕರೆಯುವ ಅಧಿಕಾರ ಇರುವುದಿಲ್ಲ ಮತ್ತು ಒಮ್ಮೆ

ಸಾಮಾನ್ಯ ಸಭೆಯಲ್ಲಿ ನಿರ್ಣಯ ತೆಗೆದುಕೊಂಡ ನಂತರ ಗ್ರಾಮ ಪಂಚಾಯಿತಿಯವರಿಗೆ ಯಾವುದೇ ಹಸ್ತಕ್ಷೇಪ ಇರುವುದಿಲ್ಲ ಅಂತಾ ಕಂಡುಬರುತ್ತದೆ.

27. ಈ ವಿಚಾರಣೆಯಲ್ಲಿ ಆ.ಸ.ನೌ–2 ಇವರು ಡಿ.ಡಬ್ಲ್ಯೂ.3 ಎಂದು ಸಾಕ್ಷಿ ನುಡಿದಿದ್ದು, ಇವರ ಪಾಟಿಸವಾಲಿನಲ್ಲಿ ಮಂಡನಾಧಿಕಾರಿಗಳು ಪ್ಯಾರಾ ನಂ.5 ರಲ್ಲಿ "ಯಾವುದೇ ರಸ್ತೆ ಕಾಮಗಾರಿಯಾಗಲೀ ಅಥವಾ ಕಟ್ಟಡ ಕಾಮಗಾರಿಯಾಗಲೀ ಒಂದೇ ಹಂತದಲ್ಲಿ ಮುಗಿಸಬೇಕಾಗತ್ತದೆ ಎನ್ನುವುದಕ್ಕೆ ಸಾಕ್ಷಿಯು ಒಂದು ವೇಳೆ ಅನುದಾನವಿದ್ದರೆ ಮುಗಿಸಬೇಕಾಗುತ್ತದೆ" ಅಂತಾ ಹೇಳಿರುತ್ತಾರೆ. ಮುಂದುವರೆದು ಪ್ಯಾರಾ ನಂ.6 ರಲ್ಲಿ "ಈ ಪ್ರಕರಣದಲ್ಲಿ ಗ್ರಾಮ ಪಂಚಾಯತಿ ಕಟ್ಟಡದ ಕಾಮಗಾರಿ ಒಂದೇ ಹಂತದಲ್ಲಿ ಮುಗಿಸಬೇಕು ಎಂದು ನಿರ್ದೇಶನ ಇತ್ತು ಎಂದರೆ ಸರಿಯಲ್ಲ. ಅದು 5 ಹಂತದಲ್ಲಿ ಅನುಮೋದನೆ ಆಗಿರುತ್ತದೆ ಅಂತಾ ಹೇಳುತ್ತಾರೆ. ಸಾಕ್ಷಿಯು ಹೇಳುವುದೇನೆಂದರೆ ಪ್ರತಿಯೊಂದು ಹಂತವು ರೂ.5 ಲಕ್ಷದ ಒಳಗಡೆ ಇರುವುದರಿಂದ ಅದಕ್ಕೆ ಟೆಂಡರ್ ಕರೆಯುವ ಅವಶ್ಯಕತೆ ಇರುವುದಿಲ್ಲ ಅದು ತುಂಡು ಗುತ್ತಿಗೆ ವ್ಯಾಪ್ತಿಗೆ ಬರುತ್ತದೆ" ಅಂತಾ ಹೇಳುತ್ತಾರೆ. ಒಂದೇ ಹಂತದಲ್ಲಿ ಕಾಮಗಾರಿ ಮುಗಿಸಬೇಕಾಗಿತ್ತು ಎಂದು ನಿರ್ದೇಶನ ಇತ್ತು ಅಂತಾ ರುಜುವಾತುಪಡಿಸಲು ಹಾಗೂ ಎಲ್ಲಾ ರೂ.12 ಲಕ್ಷ ಹಣ (ಗ್ರಾಮ ಪಂಚಯಿತಿ ಕಟ್ಟಡ) ಗೆ ತೆರಿಗೆ ಸಂಗ್ರಹವಾಗಿತ್ತು ಎನ್ನುವ ಬಗ್ಗೆ ಮಂಡನಾಧಿಕಾರಿಗಳು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ.

28. ತನಿಖಾಧಿಕಾರಿಗಳ ವರದಿಯ ಪ್ರಕಾರ (ನಿ.ಪಿ.11) ಖಂಡಿಕೆ 6.03 ರಲ್ಲಿ "ಕ್ರಿಯಾ ಯೋಜನೆಯನ್ನು ತಯಾರಿಸಿ ಸಲ್ಲಿಸಿದ ಅಂದಿನ ಪಿ.ಡಿ.ಓ ಶ್ರೀ. ಮುರುಡಯ್ಯ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ. ಎಂ.ವಿ ರವೀಂದ್ರ ರೆಡ್ಡಿ ಇವರು ಕಾರಣರಾಗಿರುತ್ತಾರೆಂದು ಅಭಿಪ್ರಾಯಿಸುತ್ತೇನೆ" ಅಂತಾ ಹೇಳಿರುತ್ತಾರೆ. ಆದರೆ ಆ.ಸ.ನೌ–1 ಪರ ವಕೀಲರು ಇವರಿಗೆ (ಪಿ.ಡಬ್ಲ್ಯೂ.2) ಪಾಟಿಸವಾಲು ಮಾಡಿದಾಗ ಮೇಲೆ ಹೇಳಿದ ಹಾಗೆ ಹಾಗೂ ಪ್ಯಾರಾ ನಂ.15 ಮತ್ತು 16 ರಲ್ಲಿ ಒಪ್ಪಿಕೊಂಡಂತೆ ಕ್ರಿಯಾ ಯೋಜನೆಯನ್ನು ತಯಾರಿಸುವಲ್ಲಿ ಆ.ಸ.ನೌ–1 ಇವರ ಪಾತ್ರ ಇರುವುದಿಲ್ಲ ಅಂತಾ ನುಡಿದಿದ್ದರಿಂದ, ಅಲ್ಲದೇ ಕ್ರಿಯಾ ಯೋಜನೆಗೆ

ಅನುಮೋದನೆ ನೀಡುವವರು ಕಾರ್ಯನಿರ್ವಾಹಕ ಅಭಿಯಂತರರು ಇರುವುದರಿಂದ ಮತ್ತು ಗ್ರಾಮ ಪಂಚಾಯಿತಿಗೆ ಒಮ್ಮೆಲೇ ನಿಧಿ ಸಂಗ್ರಹ ಆಗಿರುತ್ತದೆ ಎಂದು ದಾಖಲಾತಿಗಳು ಇಲ್ಲದೇ ಇರುವುದರಿಂದ ಒಂದೇ ಹಂತದಲ್ಲಿ ಕಾಮಗಾರಿ ಮುಗಿಸಬೇಕಾಗಿತ್ತು ಎಂದು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಸಾಬೀತುಪಡಿಸಿರುವುದಿಲ್ಲ.

29.ಮುಂದುವರೆದು ಪಿ.ಡಬ್ಲ್ಯೂ.2 ಇವರ ವರದಿ ನಿ.ಪಿ.11 ರಲ್ಲಿ ಖಂಡಿಕೆ ನಂ.3.02 ಹಾಗೂ 3.03 ರಲ್ಲಿ ಗ್ರಾಮ ಪಂಚಾಯಿತಿ ಕಟ್ಟಡ ವೀಕ್ಷಿಸಿದಾಗ ಕಂಡುಬಂದ ವಿಷಯದ ಬಗ್ಗೆ ಬರೆದಿರುತ್ತಾರೆ. ಖಂಡಿಕೆ ನಂ.3.02 ರಲ್ಲಿ "ಮೊದಲನೇ ಅಂತಸ್ತಿನ ಕಾಮಗಾರಿಯು 2008 ರಲ್ಲಿ ಪ್ರಾರಂಭಗೊಳಿಸಿ 2010 ರಲ್ಲಿ ಪೂರ್ಣಗೊಳಿಸಿ, ಪ್ರಸ್ತುತ ಮೊದಲನೆ ಅಂತಸ್ತಿನ ಕಟ್ಟಡದ ಒಳಭಾಗದಲ್ಲಿ ಒಂದು ದೊಡ್ಡ ಹಾಲ್, ಎಡಭಾಗಕ್ಕೆ 2 ಕೊಠಡಿಗಳು ಇದ್ದು, ಹಾಲ್ ನಂತರ ಲಾಕರ್ ರೂಂ ಇದ್ದು, ಪ್ರಸ್ತುತ ಕಟ್ಟಡದಲ್ಲಿ ಕೆನರಾ ಬ್ಯಾಂಕ್ ಶಾಖೆಯು ಕಳೆದ 5 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಸುಮಾರು ರೂ.65,000/– ಗಳಂತೆ ಬಾಡಿಗೆಯನ್ನು ನೀಡುತ್ತಿರುವುದಾಗಿ ಕೆನರಾ ಬ್ಯಾಂಕಿನ ಮ್ಯಾನೇಜರ್ ಆದ ಶ್ರೀ. ಕೆ ರಾಜೇಂದ್ರನ್ ಬೆಂಗಳೂರು ರವರು ಮೌಖಿಕವಾಗಿ ತಿಳಿಸಿರುತ್ತಾರೆ" ಅಂತಾ ನಮೂದು ಇರುತ್ತದೆ. ಅದರಂತೆ ಖಂಡಿಕೆ 3.03 ರಲ್ಲಿ "ಸದರಿ ಕಟ್ಟಡವನ್ನು ಪರಿಶೀಲಿಸಿದಾಗ ಕಟ್ಟಡದ ನಿರ್ಮಾಣ ಸಮಾಧಾನಕರವಾಗಿದ್ದು, ಕಟ್ಟಡದ ಒಳಭಾಗದ ಹಾಗೂ ಹೊರಭಾಗದ ಗೋಡೆಗಳಲ್ಲಿ ಸಣ್ಣದಾಗಿ ಬಿರುಕು ಬಿಟ್ಟಿದ್ದು, ಕಟ್ಟಡದ ಒಳಭಾಗದಲ್ಲಿ ಗೋಡೆಯು ಮಳೆಯ ನೀರಿನಿಂದ ತೇವವಾಗಿರುವುದು, ಅಲ್ಲಲ್ಲಿ ಪೇಂಟ್ ಕಿತ್ತಿರುವುದು, ರೋಲಿಂಗ್ ಶೆಟ್ಟರ್ ತೃಪ್ತಿಕರವಾಗಿರುವುದನ್ನು, ಕಟ್ಟಡದ ಚಜ್ಜಾ ಗೋಡೆಯ ಅಂಚುಗಳಲ್ಲಿ ಬಿರುಕು ಬಿಟ್ಟಿದ್ದು, ಸಿಮೆಂಟ್ ಕಿತ್ತು ಹೋಗಿದ್ದು ಕಾಣಬಹುದಾಗಿದೆ" ಅಂತಾ ನಮೂದು ಇರುತ್ತದೆ. ಸದರಿ ವಿಷಯದ ಬಗ್ಗೆ ಆ.ಸ.ನೌ–1 ಪರ ವಕೀಲರು ಇವರಿಗೆ ಮಾಡಿದ ಪಾಟಿಸವಾಲಿನಲ್ಲಿ ಪ್ಯಾರಾ ನಂ.21 ರಲ್ಲಿ "2008–09 ರಲ್ಲಿ ಈ ಕಟ್ಟಡ ಕಾಮಗಾರಿಯನ್ನು ಕೈಗೊಂಡಿರುತ್ತಾರೆ ಎಂದರೆ ಸರಿ. ಕಟ್ಟಡ ಕಾಮಗಾರಿಯಾದ 8 ವರ್ಷಗಳ ನಂತರ ದಿನಾಂಕ: 13/04/2017 ರಂದು ತಪಾಸಣೆ ಮಾಡಿರುತ್ತಾರೆ ಎಂದರೆ ಸರಿ ಅಂತಾ ಒಪ್ಪಿಕೊಂಡಿರುತ್ತಾರೆ. ಅಲ್ಲದೇ ಕಟ್ಟಡ ಕಟ್ಟಿದ 5 ವರ್ಷಗಳ ನಂತರ ಕಟ್ಟಡದ ಬಣ್ಣ ಮಾಸು ಹೋಗಿ ಮತ್ತು ಸಣ್ಣ

&

ಪುಟ್ಟ ಬಿರುಕುಗಳು ಬೀಳುವುದು ಸರ್ವೆ ಸಾಮಾನ್ಯ ಎಂದರೆ ಸರಿ ಅಂತಾ ಒಪ್ಪಿಕೊಂಡಿರುತ್ತಾರೆ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ತನಿಖಾಧಿಕಾರಿಗಳು ತುಂಡು ಗುತ್ತಿಗೆ ಆಧಾರದ ಮೇಲೆ ಕಾಮಗಾರಿಯನ್ನು ಕೈಗೊಳ್ಳಲು ಕಾರ್ಯನಿರ್ವಾಹಕ ಅಧಿಕಾರಿ ಎಂ.ಎ ರವೀಂದ್ರ ರೆಡ್ಡಿ ಇವರು ಅನುಮೋದನೆ ನೀಡಿರುತ್ತಾರೆ ಅಂತಾ ಪಿ.ಡಬ್ಲ್ಯೂ.2 ಇವರು ಒಪ್ಪಿಕೊಂಡ ಕಾರಣ ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಈ ವಿಷಯವನ್ನು ರುಜುವಾತುಪಡಿಸಿರುವುದಿಲ್ಲ. ಅಂದರೆ ಕೆ.ಟಿ.ಪಿ.ಪಿ ನಿಯಮ ಉಲ್ಲಂಘಿಸಿ ತುಂಡು ಗುತ್ತಿಗೆ ಆಧಾರದ ಮೇಲೆ ಕಾಮಗಾರಿಯನ್ನು ಮಾಡಿರುತ್ತಾರೆ ಅಂತಾ ರುಜುವಾತುಪಡಿಸಿರುವುದಿಲ್ಲ.

30. ಎರಡನೇಯದಾಗಿ ಕಾಂಪೌಂಡ್ ಗೋಡೆಗೆ ಸಂಬಂಧಿಸಿದಂತೆ: ಕಾಂಪೌಂಡ್ ಕಟ್ಟಡಕ್ಕೆ ರೂ.1 ಲಕ್ಷವನ್ನು ಅಂದಾಜುಪಟ್ಟಿಯನ್ನು ತಯಾರಿಸಿ ಅದರಂತೆ ಕೆಲಸ ಪೂರ್ಣಗೊಂಡ ನಂತರ ಬಿಲ್ಲು ಪಾವತಿಯಾಗಿದ್ದರು ಮತ್ತು ಅದೇ ಕಾಮಗಾರಿಗೆ 2ನೇ ಬಾರಿ ರೂ.1,59,226.80 ಗಳು ಬಿಲ್ಲು ಪಾವತಿಯಾಗಿರುತ್ತದೆ. ಸದರಿ ಬಿಲ್ಲನ್ನು ಕಿರಿಯ ಅಭಿಯಂತರರು, ಆ.ಸ.ನೌ–1 ಮತ್ತು 3 ಇವರು ಪಾಸು ಮಾಡಿರುತ್ತಾರೆ ಅಂತಾ ವಾದ ಇರುತ್ತದೆ. ಪಿ.ಡಬ್ಲ್ಯೂ.1 ಇವರು ರೂ.1 ಲಕ್ಷ ಕಾಂಪೌಂಡ್ ಕಾಮಗಾರಿಯ ಬಗ್ಗೆ ನಿ.ಪಿ.6 ನ್ನು ದಾಖಲು ಮಾಡಿದ್ದು, ಅವುಗಳನ್ನು ಪರಿಶೀಲಿಸಿದಾಗ ಅಂದಾಜುಪಟ್ಟಿಯನ್ನು ಆ.ಸ.ನೌ–1, 2 ಹಾಗೂ ಅಧ್ಯಕ್ಷರು ತಯಾರಿಸಿರುತ್ತಾರೆ. ತುಂಡು ಗುತ್ತಿಗೆ ಕರಾರು ಪತ್ರ ಗುತ್ತಿಗೆದಾರ, ಆ.ಸ.ನೌ–1 ಮತ್ತು ಅಧ್ಯಕ್ಷರ ನಡುವೆ ಆಗಿರುತ್ತದೆ. ಅಲ್ಲದೇ ಕರಾರು ಪತ್ರವನ್ನು ಹಾಜರುಪಡಿಸಿದ್ದು, ಗುತ್ತಿಗೆದಾರರು ಚೆಕ್ ಮೂಲಕ ರೂ.99,891/–ನ್ನು ಆ.ಸ.ನೌ–1 ಹಾಗೂ ಅಧ್ಯಕ್ಷರು ಸಂದಾಯ ಮಾಡಲಾಗಿದೆ. ಮುಕ್ತಾಯದ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಆ.ಸ.ನೌ–1, 2 ಮತ್ತು ಅಧ್ಯಕ್ಷರ ಸಹಿ ಇದ್ದು, ಕಿರಿಯ ಅಭಿಯಂತರರಾದ ಶ್ರೀಮತಿ. ನಾಝೀರಾ ಇವರ ಸಹಿ ಇರುತ್ತದೆ. ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಖಂಡಿಕೆ ಪ್ಯಾರಾ ನಂ.6.07 ರಲ್ಲಿ "2008–09ನೇ ಸಾಲಿನಲ್ಲಿ ಶೌಚಾಲಯ ಹಾಗೂ ಕಾಂಪೌಂಡ್ ಗೋಡೆಯು ನಿರ್ಮಾಣಗೊಂಡಿದ್ದು, ಶೌಚಾಲಯಕ್ಕಾಗಿ ರೂ.60,000/–, ಕಾಂಪೌಂಡ್‌ಗಾಗಿ ರೂ.1 ಲಕ್ಷ ಅನುಮೋದನೆಗೊಂಡಿರುವಂತೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ ಎಂದು ತನಿಖೆಯಲ್ಲಿ ಕಂಡುಬಂದಿದ್ದು ಈ ಕಾಮಗಾರಿಯಲ್ಲಿ ಯಾವುದೇ

ಅವ್ಯವಹಾರ ಕಂಡುಬಂದಿಲ್ಲವೆಂದು ಅಭಿಪ್ರಾಯಿಸಿರುತ್ತೇನೆ ಎಂದು ಹೇಳಿರುತ್ತಾರೆ. ಆದ್ದರಿಂದ ಕಾಂಪೌಂಡ್ ಗೋಡೆಗಾಗಿ ರೂ.1 ಲಕ್ಷ ಬಿಡುಗಡೆಯಾಗಿದ್ದು ಆ ಪ್ರಕಾರ ಕಾಂಪೌಂಡ್ ಗೋಡೆ ಆಗಿದ್ದು ಕಂಡುಬಂದಿದ್ದು ಅಲ್ಲದೇ ರೂ.60,000/– ಗಳಲ್ಲಿ ಶೌಚಾಲಯ ನಿರ್ಮಾಣವಾಗಿದ್ದು ಕಂಡುಬರುತ್ತದೆ.

31. ಶಿಸ್ತು ಪ್ರಾಧಿಕಾರದ ಪ್ರಕಾರ ಮೊದಲೇ ಕಾಂಪೌಂಡ್ ಗೋಡೆಯನ್ನು ರೂ.1 ಲಕ್ಷದಲ್ಲಿ ಕಟ್ಟಿದ್ದರಿಂದ ಅದೇ ಕಾಮಗಾರಿಗಾಗಿ 2ನೇ ಬಾರಿ ರೂ.1,59,226.80 ಬಿಲ್ಲು ಪಾಸಾಗಿರುತ್ತದೆ ಅಂತಾ ವಾದ ಇರುತ್ತದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ತನಿಖಾಧಿಕಾರಿಗಳು ತಮ್ಮ ವರದಿ ಖಂಡಿಕೆ ನಂ.5.02 ರಲ್ಲಿ "13ನೇ ಹಣಕಾಸು ಯೋಜನೆ ಎಂ.ಬಿ ನಂ.03603, ಪುಟ 18 ರಿಂದ 21 ರವರೆಗೆ ಕೆಲಸದ ಹೆಸರು, ಕಟ್ಟಡದ ಸುತ್ತ ಕಾಂಪೌಂಡ್ ವಾಲ್, ಅಂದಾಜುಪಟ್ಟಿ ರೂ.2.69 ಲಕ್ಷಗಳೆಂದು, ನಿಧಿ (2) ರ ದಿನಾಂಕ: 01/09/2010 ರಲ್ಲಿ ಒಟ್ಟು ಸುತ್ತಳತೆಯನ್ನು (ಅಂದರೆ ಮೊದಲೇ ಇದ್ದ ಸದರಿ ಕಟ್ಟಡದ ಮುಂಭಾಗದ ಕಾಂಪೌಂಡ್ ಗೋಡೆಯ ಅಳತೆ ಹಾಗೂ ಬಲಭಾಗದ ಕಾಂಪೌಂಡ್ ಗೋಡೆಯ ಅಳತೆಯನ್ನು ಸೇರಿಸಿರುತ್ತಾರೆ). 62.5 ಮೀಟರ್‌ಗಳಿಗಾಗಿ ಸಹಾಯಕ ಅಭಿಯಂತರರಾದ ಶ್ರೀ. ಗೋಪಾಲ್ (ಆ.ಸ.ನೌ–3) ಅಂದಾಜುಪಟ್ಟಿಯನ್ನು ತಯಾರಿಸಿದ್ದು, ಒಟ್ಟು ಮೊತ್ತ ರೂ.2,69,267.95 ಲಕ್ಷಗಳಾಗಿದ್ದು, ಹಿಂದಿನ ರೂ.1 ಲಕ್ಷಗಳ ಮೊತ್ತವನ್ನು ಪಡೆದು ಉಳಿದ ರೂ.1,59,268/– ಗಳ ಮೊತ್ತವು ಕಾಂಪೌಂಡ್ ಗೋಡೆಯ ಕಾಮಗಾರಿಯಾಗಿದೆ ಎಂದು ತನಿಖೆಯಲ್ಲಿ ವಿವರಿಸಿ ಹೇಳಿದರೆ, ಅದಕ್ಕೆ ಪ್ರತ್ಯುತ್ತರವಾಗಿ ರೂ.1 ಲಕ್ಷ ಹಣ ಬಿಡುಗಡೆಯಾದಾಗ ಕಾಂಪೌಂಡ್ ಗೋಡೆ ಕಟ್ಟಿರಲಿಲ್ಲವೆಂದು ರೂ.2.69 ಲಕ್ಷ ಬಿಡುಗಡೆಯಾದಾಗ ಒಂದು ಬಾರಿಗೆ ಕಟ್ಟಿರುತ್ತಾರೆ ಅಂತಾ ತಿಳಿಸಿರುತ್ತಾರೆ ಅಂತಾ ನಮೂದು ಇರುತ್ತದೆ. ಮುಂದುವರೆದು ಖಂಡಿಕೆ ನಂ.5.03 ರಲ್ಲಿ "ಆದರೆ ಕಾಂಪೌಂಡ್ ಗೋಡೆಗಾಗಿ ರೂ.1 ಲಕ್ಷ ಅನುಮೋದನೆಗೊಂಡಿದ್ದು, ಈಗಾಗಲೇ ಬಿಡುಗಡೆಯಾಗಿದೆ ಅಲ್ಲವೇ? ಎಂದು ಪ್ರಶ್ನಿಸಿದಾಗ ಮೌನವಾಗಿದ್ದು, ತಮ್ಮಿಂದಾಗಿರುವ ತಪ್ಪನ್ನು ಒಪ್ಪಿಕೊಂಡಿರುತ್ತಾರೆ. ಅಳತೆ ಪುಸ್ತಕ (1) ರ ರೂ.1 ಲಕ್ಷಗಳ ಮತ್ತು ಅಳತೆ ಪುಸ್ತಕ (2) ರಲ್ಲಿನ ಕಾಂಪೌಂಡ್ ಗೋಡೆಯ ಮೊತ್ತವು ರೂ.2.69 ಲಕ್ಷಗಳ ದಾಖಲಾತಿಗಳನ್ನು ಒಂದು ವಾರದ ಒಳಗಾಗಿ ಸಲ್ಲಿಸುವುದಾಗಿ ಆ.ಸ.ನೌ–2

ಸುಬಾನ್ ಸಾಬ್ ಇವರು ಒಪ್ಪಿಕೊಂಡಿರುತ್ತಾರೆ" ಅಂತಾ ತಿಳಿಸಿರುತ್ತಾರೆ. ಮುಂದುವರೆದು, ಖಂಡಿಕೆ 6.08 ರಲ್ಲಿ ಕಾಂಪೌಂಡ್ ಗೋಡೆಯ ನಿರ್ಮಾಣದಲ್ಲಿ 2 ಬಿಲ್ಲುಗಳು ಪಾಸಾಗಿದ್ದು, ಅವ್ಯವಹಾರ ಮೊತ್ತವಾದ ರೂ.1.59 ಲಕ್ಷಗಳಿಗೆ ಬಿಲ್ಲು ಪಾವತಿಸಿಕೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಸುಬಾನ್ ಸಾಬ್ (ಆ.ಸ.ನೌ-2) ರವರು ಬಿಲ್ಲು ಪಾವತಿಸಿರುವ ಬಗ್ಗೆ ದಾಖಲೆ ಮತ್ತು ವಿವರಣೆಗಳನ್ನು ಒಂದು ವಾರದ ಒಳಗೆ ಈ ಸಂಸ್ಥೆಗೆ ಸಲ್ಲಿಸುವುದಾಗಿ ತಿಳಿಸಿದ್ದು, ದಾಖಲೆಗಳನ್ನು ಮತ್ತು ಸಮಜಾಯಿಷಿಯನ್ನು ನೀಡುವಲ್ಲಿ ವಿಫಲರಾಗಿರುತ್ತಾರೆ. ಈ ಪ್ರಕರಣದಲ್ಲಿ ಕಾರಣರಾದ ಆ.ಸ.ನೌ-2 ಮತ್ತು 3 ಹಾಗೂ ಕಾರ್ಯದರ್ಶಿ ಇವರುಗಳಿಂದ ಅವ್ಯವಹಾರ ಮೊತ್ತವನ್ನು ಸಮನಾಗಿ ವಸೂಲು ಮಾಡಬಹುದೆಂದು ಅವರು ಅಭಿಪ್ರಾಯ ಪಡಿಸಿರುತ್ತಾರೆ.

32. ಆ.ಸ.ನೌ-1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ 2ನೇ ಬಾರಿ ಕಾಂಪೌಂಡ್ ಗೋಡೆಯನ್ನು ಕಟ್ಟಿರುವುದಿಲ್ಲ ಆದ್ದರಿಂದ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲ ಅಂತಾ ಹೇಳಿರುತ್ತಾರೆ. ಆದರೆ ಆ.ಸ.ನೌ-3 ಇವರು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯ ಪ್ಯಾರಾ ನಂ.5 ರಲ್ಲಿ "ತನಿಖಾ ವರದಿ ನಿ.ಪಿ.11ರ ಖಂಡಿಕೆ 5.02 ರಲ್ಲಿ ಕಟ್ಟಡದ ಸುತ್ತ ಕಾಂಪೌಂಡ್ ಗೋಡೆಯ ಅಂದಾಜು ಮೊತ್ತ ರೂ.2.69 ಲಕ್ಷವೆಂದು ನಿ.ಪಿ.11 ರ ಖಂಡಿಕೆ 6.08 ರಲ್ಲಿ ಕಿರಿಯ ಅಭಿಯಂತರರಾದ ನಾನು ಕಾಮಗಾರಿಯನ್ನು ನಿರ್ವಹಿಸಿ ರೂ.1.59 ಲಕ್ಷ ಪಾವತಿಸಿಕೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ ಎಂದು ನಮೂದಿಸಲಾಗಿದೆ. ಕಾಂಪೌಂಡ್ ಗೋಡೆಯ ಕಾಮಗಾರಿಯು ಒಟ್ಟು ಅಂದಾಜು ಮೊತ್ತ ರೂ.2.69 ಲಕ್ಷ, ಶ್ರೀಮತಿ. ನಾಝೀರಾ ರವರು ನಿರ್ವಹಿಸಿದ ಕಾಮಗಾರಿಯ ಮೊತ್ತ ರೂ.1 ಲಕ್ಷ, ನಾನು ನಿರ್ವಹಿಸಿರುವ ಕಾಮಗಾರಿಗೆ ರೂ.1,59,268/- ನಿ.ಡಿ.1 ರ ಪ್ರಕಾರ ಪಾವತಿಸಲಾಗಿದೆ. ಕಾಂಪೌಂಡ್ ಗೋಡೆ ನಿರ್ಮಾಣಕ್ಕಾಗಿ ಪಾವತಿಸಿರುವ ಮೊತ್ತ ರೂ.1 ಲಕ್ಷ + ರೂ.1,59,268/- = ರೂ.2,59,268/- ವೆಚ್ಚವಾಗಿದ್ದು, ಹೆಚ್ಚು ಮೊತ್ತ ವೆಚ್ಚವಾಗಿಲ್ಲವೆಂದು ನಿ.ಡಿ.1 ರಲ್ಲಿ ನಮೂದು ಆಗಿರುತ್ತದೆ" ಅಂತಾ ನುಡಿದಿರುತ್ತಾರೆ. ಆ.ಸ.ನೌ-2 ಇವರು ಡಿ.ಡಬ್ಲ್ಯೂ.3 ಎಂದು ಸಾಕ್ಷಿ ನುಡಿದಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಕಾಂಪೌಂಡ್ ಗೋಡೆಯನ್ನು 2

ಹಂತಗಳಲ್ಲಿ ಬೇರೆ ಬೇರೆ ಯೋಜನೆಗಳಲ್ಲಿ ಮತ್ತು ಬೇರೆ ಬೇರೆ ಅನುದಾನದ ಅಡಿಯಲ್ಲಿ ಅಳವಡಿಸಿಕೊಂಡು ಪಾವತಿಸಲಾಗಿದೆ ಎಂದು ಹೇಳಿರುತ್ತಾರೆ. ಮೊದಲು ರೂ.1 ಲಕ್ಷಕ್ಕೆ ಕಾಂಪೌಂಡ್ ಗೋಡೆಯನ್ನು ಕಟ್ಟಲಾಗಿದ್ದು, ಅದೇ ಕಾಮಗಾರಿಗಾಗಿ 2ನೇ ಬಾರಿ ಏಕೆ ಹಣವನ್ನು ಮಂಜೂರು ಮಾಡಿಕೊಳ್ಳಲಾಗಿರುತ್ತದೆ ಅಂತಾ ಆ.ಸ.ನೌ–2 ಮತ್ತು 3 ಇವರು ಹೇಳಿರುವುದಿಲ್ಲ. ಅಲ್ಲದೇ ತನಿಖಾಧಿಕಾರಿಗಳು ಈಗಾಗಲೇ ಖಂಡಿಕೆ 5.02 ಮತ್ತು 5.03 ರಲ್ಲಿ ಹೇಳಿದ ಬಗ್ಗೆ ಸಮಂಜಸ ಉತ್ತರ ನೀಡಿರುವುದಿಲ್ಲ. ರೂ.1 ಲಕ್ಷದಲ್ಲಿ ಎಷ್ಟು ಅಳತೆಯ ಕಾಂಪೌಂಡ್ ಗೋಡೆಯನ್ನು ಕಟ್ಟಲಾಗಿತ್ತು, ರೂ.2,59,268/– ರಲ್ಲಿ ಎಷ್ಟು ಅಳತೆ ಗೋಡೆಯನ್ನು ಕಟ್ಟಲಾಯಿತು ಎನ್ನುವುದಕ್ಕೆ ಯಾವುದೇ ವಿವರಣೆಯಾಗಲೀ ಅಥವಾ ದಾಖಲೆಗಳಾಗಲೀ ಸಲ್ಲಿಸಿರುವುದಿಲ್ಲ. ಆ.ಸ.ನೌ–3 ಇವರು ನಿ.ಡಿ.1 ರ ಹೊರತಾಗಿ, ಈ ಕ್ರಿಯಾ ಯೋಜನೆಯನ್ನು ಯಾರು ತಯಾರಿಸಿರುತ್ತಾರೆ ಅದಕ್ಕೆ ಅನುಮೋದನೆಯನ್ನು ಯಾರು ನೀಡಿರುತ್ತಾರೆ ಹಾಗೂ ಅದರ ಅಂದಾಜುಪಟ್ಟಿಯನ್ನು ಹಾಜರುಪಡಿಸಿರುವುದಿಲ್ಲ.

33. ಮೇಲಿನ ಎಲ್ಲಾ ಸಾಕ್ಷಿ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ ಆ.ಸ.ನೌ–2 ಮತ್ತು 3 ಇವರು ಈಗಾಗಲೇ ರೂ.1 ಲಕ್ಷ ಕಾಂಪೌಂಡ್ ಗೋಡೆ ಕಟ್ಟುವ ಸಲುವಾಗಿ ಉಪಯೋಗಿಸಿದ್ದು, ಮತ್ತೇ ಅದೇ ಕಾಂಪೌಂಡ್ ಗೋಡೆಗಾಗಿ ರೂ.2,59,268/– ಗಳನ್ನು ಏಕೆ ಮಂಜೂರು ಮಾಡಿಕೊಂಡಿರುತ್ತಾರೆ ಮತ್ತು ಈ ಹಣದಲ್ಲಿ ಎಷ್ಟು ಅಳತೆಯ ಕಾಂಪೌಂಡ್ ಗೋಡೆಯನ್ನು ಕಟ್ಟಿರುತ್ತಾರೆ ಅಂತಾ ಮಾಹಿತಿಯನ್ನು ನೀಡಿರುವುದಿಲ್ಲ ಮತ್ತು ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಆದರೆ ತನಿಖಾಧಿಕಾರಿಗಳ ವರದಿ ಹಾಗೂ ಸಾಕ್ಷಿಗಳ ಪ್ರಕಾರ ಆ.ಸ.ನೌ–2 ಮತ್ತು 3 ಇವರು ಮೊದಲನೆ ಸಲ ಕಟ್ಟಡದ ಕಾಂಪೌಂಡ್ ಗೋಡೆ ಇದ್ದರೂ ಸಹಿತ 2ನೇ ಬಾರಿಗೆ ಮತ್ತೆ ಕಾಂಪೌಂಡ್ ಗೋಡೆ ಕಟ್ಟುವ ಅವಶ್ಯಕತೆ ಏನು ಇತ್ತು ಅಂತಾ ಹೇಳಿರುವುದಿಲ್ಲ. ಆದ್ದರಿಂದ, ನನ್ನ ಅಭಿಪ್ರಾಯಲ್ಲಿ ಆ.ಸ.ನೌ–2 ಮತ್ತು 3 ಇವರು ಸಮನಾಗಿ ರೂ.2,59,268/– ಗಳನ್ನು ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಅಂತಾ ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ರುಜುವಾತುಪಡಿಸಿರುತ್ತಾರೆ. ಆದರೆ

2ನೇ ಬಾರಿ ಕಾಂಪೌಂಡ್ ಗೋಡೆ ಕಟ್ಟವಲ್ಲಿ ಆ.ಸ.ನೌ–1 ಇವರ ಪಾತ್ರ ಏನು ಇರುತ್ತದೆ ಅಂತಾ ಮಂಡನಾಧಿಕಾರಿಗಳು ರುಜುವಾತುಪಡಿಸಿರುವುದಿಲ್ಲ.

34. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ–1 ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸಿರುವುದಿಲ್ಲ. ಆದರೆ ಆ.ಸ.ನೌ–2 ಮತ್ತು 3 ಇವರುಗಳು ವಿರುದ್ಧ ಭಾಗಶಃ ಸಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

35. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರ (1) **ಶ್ರೀ. ಮುರುಡಯ್ಯ ಟಿ,** ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಯಲಿಯೂರು ಗ್ರಾಮ ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ವಿಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

ಆ.ಸ.ನೌಕರ (2) **ಶ್ರೀ. ಎಸ್.ಎಂ ಸುಭಾನ್ ಸಾಹೇಬ್,** ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ–ವಿಭಾಗ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (3) **ಶ್ರೀ. ಗೋಪಾಲ್,** ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳ

ವಿರುದ್ಧ 2ನೇ ಬಾರಿ ಕಾಂಪೌಂಡ್ ಗೋಡೆ ಕಟ್ಟುವ ಬಗ್ಗೆ ಇರುವ ಆರೋಪವನ್ನು ಭಾಗಶಃ ರುಜುವಾತುಪಡಿಸುವಲ್ಲಿ ಸಫಲವಾಗಿರುತ್ತದೆ.

**ಆ.ಸ.ನೌ–1 ರವರ ನಿವೃತ್ತಿ ದಿನಾಂಕ: 31/12/2021, ಆ.ಸ.ನೌ–2 ರವರ ನಿವೃತ್ತಿ ದಿನಾಂಕ: 31/05/2024 ಮತ್ತು ಆ.ಸ.ನೌ–3 ರವರ ನಿವೃತ್ತಿ ದಿನಾಂಕ: 31/05/2020 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

29/11/22

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. S Hanumegowda S/o Subbarayappa, Devanahalli Taluk, Bengaluru Rural District. |
| | **PW-2** | Sri. M Nagaratna D/o late H Manchaiah, AEE, TAC, KLA, Bengaluru. |
| 2 | **Documents marked on behalf of the Disciplinary Authority Ex.P-1 to Ex.P-13** | |
| | **Ex.P.1 & 1(a)** | Complaint with signature. |
| | **Ex.P.2 & 2(a)** | Form No.1 with Signature. |
| | **Ex.P.3 & 3(a)** | Form No.2 with Signature (Affidavit). |
| | **Ex.P.4** | Documents pertaining to project. |
| | **Ex.P.5** | Documents pertaining to Yaliyuru Gram Panchayth. |
| | **Ex.P.6** | Documents pertaining to compound project. |
| | **Ex.P.7** | Piece work tender agreement with enclosures. |
| | **Ex.P.8** | Documents pertaining to Gram Panchayath. |
| | **Ex.P.9** | Letter dtd: 05/02/2011 addressed by EO, TP, Devanahalli. |
| | **Ex.P. 10** | Spot mahazar with signature. |

| | | |
|---|---|---|
| | **& 10(a)** | |
| | **Ex.P. 11 & 11(a)** | Investigation report with signature. |
| | **Ex.P. 12** | Photographs. |
| | **Ex.P. 13** | CD |
| **3** | **Witness examined on behalf of the DGO, Documents marked on behalf of the DGO** | |
| | **DW-1** | Sri. Gopal S/o K.R Kuppuswamy, Rtd. JE, Devanahalli, Bengaluru Rural District. |
| | **DW-2** | Sri. T Murudaiah S/o Late Thimmaiah, Rtd. EO, TP, Bengaluru Rural District. |
| | **DW-3** | Sri. S.M Subhan Saheb S/o Late Buden Sab, EE, RDW&SD, Koppal. |
| **4** | **Documents marked on behalf of the DGOs through the complainant** | |
| | **Ex.D.1** | Documents pertaining to 13th financial project. |
| | **Ex.D.2** | Documents pertaining to Yaliyuru Gram Panchayath. |

Dated this the 29th November, 2022

Sd/- 29/11/22

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.